# ಅಧ್ಯಾಯ – ೫

## ಧಾರವಾಡ ಜಿಲ್ಲೆಯ ಜನಪದ ಚಿತ್ರಕಲೆ : ಸಾಂಸ್ಕೃತಿಕ ನೋಟ

ಭಾರತವು ಕೃಷಿ ಪ್ರಧಾನ ಹಳ್ಳಿಗಳಿಂದ ಕೂಡಿದ ಸಮೃದ್ಧ ದೇಶ. ಇಲ್ಲಿ ವೈವಿಧ್ಯಮಯ ಆಚರಣೆಗಳು, ನಂಬಿಕೆ, ನಿಷೇಧ, ವಿಧಿ–ವಿಧಾನಗಳು, ಪದ್ಧತಿಗಳು ಸಾವಿರಾರು ವರ್ಷಗಳಿಂದ ತಲೆಮಾರಿನಿಂದ ತಲೆಮಾರಿಗೆ ಉಳಿದುಕೊಂಡು ಬಂದಿವೆ. ಪ್ರಕೃತಿಯ ಜೊತೆಗೆ ನಿಕಟ ಸಂಬಂಧವನ್ನು ಇರಿಸಿಕೊಂಡಿದ್ದ ಮನುಷ್ಯ ಅದರ ಬಗ್ಗೆ ವಿಸ್ಮಯ, ಕುತೂಹಲಗಳನ್ನು ಹೊಂದಿದ್ದರಿಂದ ಪ್ರಕೃತಿಯನ್ನು ಆರಾಧಿಸತೊಡಗಿದ. ‘ನಿಸರ್ಗ ಪ್ರಕ್ರಿಯೆಗಳಾದ ಸೂರ್ಯೋದಯ, ಚಂದ್ರೋದಯ, ವಿಕೋಪಗಳಾದ ಗುಡುಗು, ಸಿಡಿಲು, ಚಂಡಮಾರುತ ಇತ್ಯಾದಿಗಳ ಭಯವೇ ಅವುಗಳನ್ನು ದೈವೀಕರಿಸಿದೆ. ನಿಸರ್ಗದ ಶಕ್ತಿಯಿಂದ ಪಾರಾಗಲು ಹಾಗೂ ಶಮನ ಮಾಡುವ ಉದ್ದೇಶದಿಂದ ಆಚರಣೆಗಳು ಉದಯಿಸಿವೆ. ಮಾನವನ ಬದುಕನ್ನು ರೂಪಿಸುವಲ್ಲಿ, ಸಂಸ್ಕೃತಿಯ ಪೋಷಣೆಯಲ್ಲಿ, ನಾಗರಿಕತೆಯನ್ನು ಬೆಳೆಸುವಲ್ಲಿ ಸಂಪ್ರದಾಯ ಆಚರಣೆಗಳು ಮಹತ್ವದ ಪಾತ್ರ ವಹಿಸಿವೆ’[೧] ಎಂಬ ಮಾತುಗಳನ್ನು ಗಮನಿಸಿದಾಗ ಮನುಷ್ಯ ತನ್ನ ಅವಶ್ಯಕತೆಗನುಸಾರ ಅನಿವಾರ್ಯವಾಗಿ ರೂಢಿಸಿಕೊಂಡ, ರೂಪಿಸಿಕೊಂಡ ಚಟುವಟಿಕೆಗಳಿಗೆ ತಕ್ಕಂತೆ ಆಚರಣೆಗಳು ಹುಟ್ಟಿಕೊಂಡವು. ಈ ಎಲ್ಲಾ ಆಚರಣೆಗಳೇ ಮಾನವ ಜೀವನದ ಇಡೀ ಸಂಸ್ಕೃತಿಯಾಗಿ ಉಳಿದುಕೊಂಡು ಸಾಗುತ್ತಿವೆ ಎಂಬ ಸತ್ಯ ಗೋಚರವಾಗುತ್ತದೆ.

‘ಸಂಸ್ಕೃತಿ ಎಂಬ ಶಬ್ದ ಈಚೆಗೆ ಬಹುಮುಖವಾದ ಅರ್ಥವನ್ನು ಪಡೆದು ಬೆಳೆಯುತ್ತಾ ಬಂದಿದೆ.ಮಾನವ ಸಮುದಾಯದ ಸಂಪ್ರದಾಯಗಳಿಂದ ಹಿಡಿದು, ವೈಯಕ್ತಿಕವಾದ ಆಚರಣೆಗಳವರೆಗೂ ಅದರ ವ್ಯಾಪ್ತಿ ಹಬ್ಬಿದೆ’.[೨]ಎಂದು ಸಂಸ್ಕೃತಿಯೊಂದಿಗಿನ ಮಾನವ ಸಂಬಂಧವನ್ನು ಹೇಳುವುದರ ಜೊತೆಗೆ ‘ಸಂಸ್ಕೃತಿಯೆಂಬುದು ವ್ಯಕ್ತಿಯ ಸ್ವಭಾವಕ್ಕೆ ಸಂಸ್ಕಾರವನ್ನು ಕೊಡುವ ಶಕ್ತಿ ಎಂಬ ಮಾತೂ ಅದನ್ನೇ ಸಮರ್ಥಿಸುತ್ತದೆ. ವ್ಯಕ್ತಿಯ ಮನಸ್ಸಿನ ಮೇಲೆ ಒಂದು ಸಂಸ್ಕಾರವನ್ನುಂಟು ಮಾಡಿ ಆತನನ್ನು ಪೂರ್ಣತೆಯ ಕಡೆಗೆ ನಡೆಯುವಂತೆ ಮಾಡುವುದೇ ಸಂಸ್ಕೃತಿಯ ಪರಮ ಪ್ರಯೋಜನ. ಅದಕ್ಕೆ ಸಹಾಯಕವಾಗುವ ಸಾಧನಗಳೆಲ್ಲವೂ ಸಂಸ್ಕೃತಿಯಲ್ಲಿ ಸಮಾವೇಶಗೊಳ್ಳುತ್ತವೆ. ಧರ್ಮ ಜಿಜ್ಞಾಸೆಯಾಗಲೀ, ಸಂಗೀತ ಸಾಹಿತ್ಯಾದಿ ಕಲೆಗಳಾಗಲೀ ಸಾರ್ಥಕವಾಗಬೇಕಾದರೆ ಅವು ವ್ಯಕ್ತಿಯ ಜೀವನವನ್ನು ಪೂರ್ಣತೆಯತ್ತ ಸಾಗುವಂತೆ ಮಾಡುವ

---

೧. ಕರ್ನಾಟಕ ಜನಪದ ಆಚರಣೆಗಳು: ರಮೇಶ ಸ.ಚಿ: ಪ್ರಸಾರಾಂಗ, ಕ.ವಿ.ವಿ. ಹಂಪಿ : ೨೦೧೦ : ಪು–೬

೨. ಕರ್ನಾಟಕ ಸಂಸ್ಕೃತಿ ಸಮೀಕ್ಷೆ: ತಿಪ್ಪೇರುದ್ರಸ್ವಾಮಿಎಚ್: ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು: ೨೦೧೧: ಪು.–೧

ಶಕ್ತಿಯನ್ನು ಪಡೆದಿರಬೇಕು. ಅವುಗಳಲ್ಲಿರುವ ಆ ಶಕ್ತಿಯ ಜೊತೆಗೆ ಅದನ್ನು ಅರಿತು ಆಚರಿಸಬಲ್ಲ ಸಂಸ್ಕಾರವು ವ್ಯಕ್ತಿಯಲ್ಲಿದ್ದಾರೆ.ಅವೆರಡರ ಸಂಗಮದಿಂದ ಸಂಸ್ಕೃತಿ ನಿಷ್ಪನ್ನವಾಗುತ್ತದೆ'.[೩]ಎನ್ನುವ ಅಭಿಪ್ರಾಯವು ಸಂಸ್ಕೃತಿಯ ನೆಲೆಯನ್ನು ತೋರಿಸಿಕೊಡುತ್ತದೆ.

'ಸಂಸ್ಕೃತಿಯ ಅರ್ಥ ವಿಶಾಲವಾದುದು.ವೈಯಕ್ತಿಕ, ಸಾಮಾಜಿಕ, ಧಾರ್ಮಿಕ ಮುಂತಾದ ನೆಲೆಗಳಲ್ಲಿ ಸಂಸ್ಕೃತಿ ಒಂದೊಂದು ಅರ್ಥಕೊಡುತ್ತದೆ.ಇದು ಶಿಷ್ಟ ಜನಸಮುದಾಯಗಳಲ್ಲಿ ಮಾತ್ರ ಇದೆ ಎಂದು ಹೇಳುವುದು ಪಾಕ್ಷಿಕ ಧೋರಣೆಯಾಗುತ್ತದೆ. ನಾಗರಿಕ ಸಂಪರ್ಕವಿಲ್ಲದ ಆದಿವಾಸಿಗಳಲ್ಲಿ ಸಹ ಸಂಸ್ಕೃತಿಯ ಕುರುಹುಗಳಿವೆ. ಒಂದು ಜನಸಮುದಾಯದಲ್ಲಿನ ಜೀವನ ಪದ್ಧತಿ ಅವರದೇ ಆದ ಆಚರಣೆಗಳು, ನಂಬುಗೆಗಳು, ದೇವತಾ ಪದ್ಧತಿ, ಸಾಮಾಜಿಕ ಕಟ್ಟಳೆ ಮುಂತಾದವುಗಳು ಆ ಜನಾಂಗದ ಸಂಸ್ಕೃತಿಯನ್ನು ರೂಪಿಸುವ ಅಂಶಗಳಾಗಿವೆ. ಬಾಹ್ಯ ವಿಕಾಸದಲ್ಲಿ ಒಂದು ಸಮುದಾಯ ಮುಂದಾಗಿದ್ದರೆ ಅದು ಅಲ್ಲಿನ ಭೌತಿಕ ಸಂಸ್ಕೃತಿಯ ಸಾಧನೆಯಾಗಿರುತ್ತದೆ. ಭೌತಿಕ ಸಂಸ್ಕೃತಿಯು ಕಾಲದಿಂದ ಕಾಲಕ್ಕೆ ವ್ಯತ್ಯಾಸಗೊಳ್ಳಬಹುದು (Cultural Diffusion) ಇದ್ದ ಅಂಶಗಳು ಲೋಪವಾಗಬಹುದು. ಹೊಸ ಮೌಲ್ಯಗಳು ಬಂದು ಸೇರಬಹುದು. ಆದರೆ ಆ ಜನಾಂಗದವರಲ್ಲಿ ಪಾರಂಪರಿಕವಾದ ಕಲೆ, ಸಾಹಿತ್ಯ, ಸಂಗೀತ, ಶಿಲ್ಪ ಮುಂತಾದವು ಒಂದು ಕಾಲದಿಂದ ಇನ್ನೊಂದು ಕಾಲಕ್ಕೆ ಬಳುವಳಿಯಾಗಿ ನಿಂತು ಅದರದೇ ಆದ ಕೊಡುಗೆ ಎನ್ನಿಸುತ್ತದೆ.ಈ ಬಳುವಳಿ ಲಿಖಿತ ಮಾಧ್ಯಮದಲ್ಲಿ ಇಲ್ಲವೇ ತೋಂಡಿ ಸಂಪ್ರದಾಯದಲ್ಲಿ ಯಾವುದೊಂದರ ಮೂಲಕವೂ ಪ್ರಸಾರವಾಗಬಹುದಾಗಿದೆ.'[೪]ಎಂಬ ಮಾತುಗಳಲ್ಲಿ ಯಾವುದೇ ಒಂದು ಜನಸಮುದಾಯದಲ್ಲಿ ಸಂಸ್ಕೃತಿಯನ್ನು ರೂಪಿಸುವಂಥ ಹಲವಾರು ಅಂಶಗಳು ಇದ್ದು, ಈ ಅಂಶಗಳು ಕಾಲಚಕ್ರಕ್ಕೆ ಸಿಲುಕಿ, ಬದಲಾವಣೆಗೊಳಪಟ್ಟು ಪ್ರಸರಣಗೊಳ್ಳುತ್ತಿರುತ್ತವೆ ಎಂಬುದನ್ನು ಗಮನಿಸಬೇಕು.

### ೫.೧. ಚಿತ್ರಕಲೆ ಮತ್ತು ಜನಜೀವನ:

ನಮ್ಮ ಜನಪದರಿಗೆ ಜೀವನ ಬೇರೆಯಲ್ಲ; ಅವರ ಕಲೆ ಬೇರೆಯಲ್ಲ. ಅವರಲ್ಲಿ ಸುಪ್ತವಾಗಿ ಅಡಗಿದ್ದ ಕಲೆಯನ್ನು ಹಬ್ಬ-ಹರಿದಿನಗಳಲ್ಲಿ, ಜಾತ್ರೆ-ಉತ್ಸವಗಳ ಸಂದರ್ಭಗಳಲ್ಲಿ ಪ್ರದರ್ಶನ ಮಾಡುವುದರ ಮುಖಾಂತರ ತಮ್ಮ ಭಾವನೆಗಳನ್ನು, ಸೃಜನಶೀಲ ಕಲೆಗಾರಿಕೆಯನ್ನು ಹೊರಗೆಡಹುತ್ತಾರೆ.ಒಂದೊಂದು ಹಬ್ಬದಲ್ಲೂ ವಿಶಿಷ್ಟವಾದ ಆಚರಣೆಯನ್ನು, ಎಲ್ಲರ

೩. ಕರ್ನಾಟಕ ಸಂಸ್ಕೃತಿ ಸಮೀಕ್ಷೆ: ತಿಪ್ಪೇರುದ್ರಸ್ವಾಮಿ ಎಚ್: ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು: ೨೦೧೧: ಪು.-೧೨
೪. ಬಳ್ಳಾರಿ ಜಿಲ್ಲೆಯ ಬಯಲಾಟಗಳು: ದುರ್ಗಾದಾಸ ಕೆ.ಆರ್: ಸಮತಾ ಪ್ರಕಾಶನ, ಬೆಳಗಾವಿ : ೧೯೯೬ : ಪು-೨೨೨

ಪಾಲ್ಗೊಳ್ಳುವಿಕೆಯನ್ನು ಕಾಣಬಹುದು.ಈ ಆಚರಣೆಗಳ ಪ್ರದರ್ಶನಕ್ಕೆ ನೋಡಿ ಆನಂದಿಸಲಿಕ್ಕೆ ಏನೆಲ್ಲ ಅವಕಾಶಗಳು ಇರುತ್ತವೆ ಎಂಬುದನ್ನು ಮುಂದಿನ ಹಂತಗಳಲ್ಲಿ ಕಾಣುತ್ತೇವೆ.

ಸಾಂಪ್ರದಾಯಿಕ ನೆಲೆಯಲ್ಲಿ ಒಂದು ಹಬ್ಬಕ್ಕೆ ಅದರದೇ ಆದ ವಿಶೇಷ ಸಾಂಪ್ರದಾಯಿಕ ಹಿನ್ನೆಲೆ/ಸಂದರ್ಭ (Traditional Context) ಇರುವುದನ್ನು ಕಾಣಬಹುದು.ಇಂತಿಂಥ ದಿನಗಳಲ್ಲಿ ಇಂತಹುದೇ ಚಿತ್ರ ಬಿಡಿಸಬೇಕು.ಇಂಥಹುದೇ ಸಿಂಗಾರ ಮಾಡಬೇಕು ಎಂಬಿತ್ಯಾದಿ ಸಾಂಪ್ರದಾಯಿಕ ಧೋರಣೆಯನ್ನು ಜನಪದರು ಉಳಿಸಿಕೊಂಡು ಬಂದಿರುವರು.ಹೀಗಾಗಿ ಜಿಲ್ಲೆಯ ಸಾಂಸ್ಕೃತಿಕ ವೈಭವದ ನೋಟ ಇಲ್ಲಿ ಅಗತ್ಯವೆನಿಸುತ್ತದೆ.

ಸಂಕ್ರಾಂತಿ ದಕ್ಷಿಣ ಭಾರತದಲ್ಲಿ ಆಚರಿಸುವ ಒಂದು ಮುಖ್ಯ ಹಬ್ಬ. ಪೈರನ್ನು ಕಟಾವು ಮಾಡುವ ಸಂದರ್ಭದಲ್ಲಿ ಆಚರಿಸಲಾಗುವ ಈ ಹಬ್ಬವನ್ನು ಉತ್ತರಕರ್ನಾಟಕದ ಧಾರವಾಡ ಜಿಲ್ಲೆಯಲ್ಲೂ ಬಹು ವಿಜೃಂಭಣೆಯಿಂದ ಆಚರಿಸಲಾಗುತ್ತದೆ.ಸೂರ್ಯಗ್ರಹವು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಪ್ರವೇಶ ಮಾಡುವ ದಿನವನ್ನೇ ಸಂಕ್ರಾಂತಿ ಎಂದು ಕರೆಯಲಾಗಿದೆ.ಈ ಹಬ್ಬದಲ್ಲಿ ಮುಖ್ಯವಾಗಿ ಕಂಡುಬರುವುದು 'ಎಳ್ಳು-ಬೆಲ್ಲ'.ಗ್ರಾಮೀಣ ಭಾಗದ ಮನೆಗಳಲ್ಲಿ ಎಳ್ಳು-ಬೆಲ್ಲವನ್ನು ತಯಾರಿಸಿಕೊಂಡು ಜೊತೆಗೆ ಸಕ್ಕರೆ ಅಚ್ಚುಗಳು, ಹಣ್ಣು, ಕಬ್ಬಿನ ಚಿಕ್ಕ ಚಿಕ್ಕ ತುಂಡುಗಳನ್ನು, ಬೆಲ್ಲ, ಒಣಕೊಬ್ಬರಿ, ಶೇಂಗಾ ಬೀಜಗಳಿತ್ಯಾದಿಯಾಗಿ ತೆಗೆದುಕೊಂಡು ಮನೆಮನೆಗೆ ಹೋಗಿ ಎಲ್ಲರಿಗೂ ಹಂಚುವ ಸಂಪ್ರದಾಯವುಂಟು.

ಈ ಆಚರಣೆಯಲ್ಲಿ ಮನೆಮಂದಿಯೆಲ್ಲ ಹೊಸ ಬಟ್ಟೆಯನ್ನು ಧರಿಸಿ, ಮನೆಯ ಬಾಗಿಲುಗಳಿಗೆ ಹಸಿರು ತೋರಣವನ್ನು ಕಟ್ಟಿ ಹಬ್ಬವನ್ನಾಚರಿಸುವರು.ಗಂಡುಮಕ್ಕಳು ಎತ್ತುಗಳನ್ನು ಶುಚಿಗೊಳಿಸಿ ಅವುಗಳಿಗೆ ಜೂಲು, ಕೊಂಬಣಸು, ಗೆಜ್ಜೆಪಟ್ಟಿ, ಕಾಲ್ಗೆಜ್ಜೆ ಮುಂತಾದವುಗಳನ್ನು ಹಾಕಿ ಸಿಂಗಾರ ಮಾಡುವರು.ಮನೆಯಲ್ಲಿ ತಯಾರಿಸಿದ ವಿವಿಧ ಸಿಹಿ ಅಡುಗೆಯನ್ನು ಕಟ್ಟಿಕೊಂಡು ಸಿಂಗರಿಸಿದ ಎತ್ತು ಚಕ್ಕಡಿಯನ್ನೇರಿಕೊಂಡು ಊರ ಸಮೀಪದ ನದಿ-ಹಳ್ಳಗಳ ತೀರದ ಕಡೆಗೆ ಪ್ರಯಾಣ ಬೆಳೆಸುವರು.ಈ ಸಂದರ್ಭದಲ್ಲಿ ಹಲವಾರು ನದಿ ತೀರಗಳಲ್ಲಿ ಜಾತ್ರೆಯ ಸಂಭ್ರಮವನ್ನು ಕಾಣಬಹುದು.

ಸಂಕ್ರಾಂತಿಯಲ್ಲಿ ಮಹಿಳೆಯರು ಗುಂಪುಗುಂಪಾಗಿ ಸೇರಿ ರಂಗೋಲಿ ಬಿಡಿಸುವುದು ಹಾಗೂ ಪುರುಷರು ತಮ್ಮ ದನಕರುಗಳನ್ನು ಸಿಂಗರಿಸಿ ಮೆರವಣಿಗೆ ಮಾಡುವ ಧಾರ್ಮಿಕ ಪದ್ಧತಿಯು ಸಾಮಾನ್ಯವಾಗಿ ಕಂಡುಬರುತ್ತದೆ.

'ಭಾರತಹುಣ್ಣಿಮೆ' ಉತ್ತರ ಕರ್ನಾಟಕದಲ್ಲೇ ತುಂಬ ಮಹತ್ವದ ಹಬ್ಬ. ಈ ಸಂಭ್ರಮದಲ್ಲಿ ಮಹಿಳೆಯರು 'ಬೆಳದಿಂಗಳ ಚಿತ್ರ'ವನ್ನು ಬಿಡಿಸುವರು.ಮನೆಯನ್ನು ಸಾರಣೆ ಮಾಡಿ ಶುಭ್ರಗೊಳಿಸಿ, ಸುಣ್ಣ-ಕೆಮ್ಮಣ್ಣುಗಳಿಂದ ಗೋಡೆಯ ಮೇಲೆ ಬೆರಳುಗಳಿಂದ ಚುಕ್ಕಿಗಳನ್ನು ಇಡುವ ಮುಖಾಂತರ ಉಳವಿ ತೇರು, ಚಂದ್ರ, ನಕ್ಷತ್ರ, ಬಸವಣ್ಣ, ಆನೆ, ಶಿವ-ಪಾರ್ವತಿ-ಗೌರಿ, ಹುಚ್ಚಯ್ಯ, ಹಾವು ಚೇಳು ಮೊದಲಾದ ಚಿತ್ರಗಳನ್ನು ಬಿಡಿಸುವರು.ಈ ಬೆಳದಿಂಗಳ ಚಿತ್ರಗಳಲ್ಲಿ ಉಳವಿ ತೇರು, ಚಂದ್ರ, ಬಸವಣ್ಣ ಮುಂತಾದವುಗಳು ಇಲ್ಲಿನ ಪ್ರಾದೇಶಿಕತೆಯನ್ನು ಎತ್ತಿ ತೋರಿಸುತ್ತವೆ. ಭಾರತ ಹುಣ್ಣಿಮೆಯ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲೂಕಿನ 'ಉಳವಿಯಲ್ಲಿ ಶ್ರೀ ಚನ್ನಬಸವೇಶ್ವರ ರಥೋತ್ಸವ ಜರುಗುತ್ತದೆ.ಉಳವಿ ಕ್ಷೇತ್ರವು ಐತಿಹಾಸಿಕ ಪುಣ್ಯಕ್ಷೇತ್ರ, ವನಸಿರಿಗಳ ನಾಡು, ಪಕ್ಷಿಧಾಮ, ಪಾವನತೀರ್ಥ, ಆಧ್ಯಾತ್ಮಿಕ ತಾಣ, ಕಲೆ-ವಚನಗಳ ಬೀಡು, ಸಂತ-ಶರಣರು ಐಕ್ಯವಾದ ನಾಡು ಎಂಬಿತ್ಯಾದಿ ಹೆಸರುಗಳಿಂದ ಉತ್ತರ ಕರ್ನಾಟಕದಲ್ಲೆಡೆ ಹೆಸರುವಾಸಿಯಾಗಿದೆ.ಅಲ್ಲದೇ ಧಾರವಾಡದಲ್ಲಿರುವ ಉಳವಿ ಚೆನ್ನಬಸವೇಶ್ವರ ಹಾಗೂ ಉಣಕಲ್ಲಿನ ಉಳವಿ ಬಸವೇಶ್ವರ ಜಾತ್ರೆಗಳು ಭಾರತ ಹುಣ್ಣಿಮೆಯ ಸಂದರ್ಭದಲ್ಲೇ ನಡೆಯುವುದರಿಂದ ಇವರ 'ಬೆಳದಿಂಗಳ ಚಿತ್ರ'ಗಳಲ್ಲಿ ಉಳವಿ ಜಾತ್ರೆಯ ಉತ್ಸವಮೂರ್ತಿ ಚನ್ನಬಸವಣ್ಣ, ಉಳವಿ ತೇರು, ಹುಣ್ಣಿಮೆಯ ಚಂದ್ರ ಇತ್ಯಾದಿಗಳು ರೂಪ ಪಡೆಯುತ್ತವೆ.ಈ ಆಚರಣೆಯಲ್ಲಿ ಪ್ರಾದೇಶಿಕತೆ ಎದ್ದು ಕಾಣುತ್ತದೆ.

ಬೆಳದಿಂಗಳ ಚಿತ್ರಗಳನ್ನು ಬಿಡಿಸುವ ಮಹಿಳೆಯರು ಅವಿವಾಹಿತರಾಗಿದ್ದರೆ 'ಕಂಕಣಭಾಗ್ಯ', ಮದುವೆಯಾದವರಿಗೆ 'ಮುತ್ತೈದೆ ಭಾಗ್ಯ', 'ಮಕ್ಕಳ ಭಾಗ್ಯ' ಪ್ರಾಪ್ತವಾಗುವುದೆಂಬ ನಂಬಿಕೆ ಇದೆ.ಒಬ್ಬ ಮಹಿಳೆ ರಂಗೋಲಿ ಅಥವಾ ಯಾವುದೇ ಚಿತ್ರವನ್ನು ಬಿಡಿಸಿದರೆ ಅವಳ ಮನಸ್ಸಿನಲ್ಲಿನ ಎಲ್ಲ ದುಗುಡ ದುಮ್ಮಾನಗಳು ಕಳೆದು ಹೋಗಿ ಹಗುರವಾಗುತ್ತಾಳೆ.ಆ ಚಿತ್ರವನ್ನು ನೋಡುವವರ ಮನಸ್ಸೂ ಶಾಂತತೆಯಿಂದ ಪ್ರಫುಲ್ಲಗೊಳ್ಳುತ್ತದೆ.ನೂರಾರು ಪುಟಗಳಲ್ಲಿ ಹೇಳಲಾರದ್ದನ್ನು ಕೇವಲ ಒಂದು ಚಿತ್ರ ಮಾತ್ರ ಹೇಳಬಲ್ಲದು.

ಪಾಲ್ಗುಣ ಮಾಸದ ಶುಕ್ಲ ಪಕ್ಷದ ಪೂರ್ಣಿಮೆ (ಹುಣ್ಣಿಮೆ)ಯೆಂದು ಆಚರಿಸುವ ಹಬ್ಬವೇ 'ಹೋಳಿಹಬ್ಬ' ಅಥವಾ 'ಕಾಮನಹಬ್ಬ'. ಈ ಹಬ್ಬಕ್ಕೆ ಉತ್ತರಭಾರತದಲ್ಲಿ ಹೆಚ್ಚು ಮಹತ್ವ ಕಂಡುಬಂದಂತೆ ಉತ್ತರ ಕರ್ನಾಟಕದಲ್ಲೂ ಕೂಡ ಮಹತ್ವ ಕಂಡುಬರುತ್ತದೆ.

ಪುರಾಣ ಕಥೆಗಳಲ್ಲಿ ಬರುವಂತೆ ತಾರಕಾಸುರನ ಉಪಟಳವು ಹೆಚ್ಚಾಗಿರುತ್ತದೆ. ತನಗೆ ಮರಣ ಬಾರದಿರಲಿ, ಬಂದರೂ ಅದು ಶಿವನಿಗೆ ಜನಿಸಿದ ಶಿಶುವಿನಿಂದ ಬರಲಿ ಎಂದು

ಬ್ರಹ್ಮನಿಂದ ಆತ ವರ ಪಡೆದಿರುತ್ತಾನೆ. ಭೋಗ ಸಮಾಧಿಯಲ್ಲಿದ್ದ ಶಿವ–ಪಾರ್ವತಿಯರು ಸಮಾಗಮ ಹೊಂದಲು ಸಾಧ್ಯವಿರುವುದಿಲ್ಲ. ಹೀಗಾಗಿ ಶಿವನ ತಪೋಭಂಗ ಮಾಡಿ, ಶಿವ–ಪಾರ್ವತಿಯರು ಸಮಾಗಮ ಹೊಂದುವಂತೆ ಮಾಡಲು ಮನ್ಮಥ (ಕಾಮ)ನು ಹೂಬಾಣ ಬಿಡುತ್ತಾನೆ. ಹೂಬಾಣದ ಹೊಡೆತಕ್ಕೆ ಕೋಪದಿಂದ ಎದ್ದ ಶಿವನು ಮನ್ಮಥನನ್ನು ಉರಿಗಣ್ಣಿಂದ ಸುಟ್ಟು ಹಾಕುತ್ತಾನೆ. ಪತಿಭಿಕ್ಷೆಯನ್ನು ಬೇಡಿದ ರತಿಗಾಗಿ ಮನ್ಮಥನಿಗೆ ಅನಂಗನಾಗಿದ್ದು, ರತಿಯೊಡನೆ ಶರೀರಿಯಾಗುವಂತೆ ವರ ಕರುಣಿಸಿದ. ಈ ಘಟನೆ ನಡೆದ ದಿನವೇ 'ಪಾಲ್ಗುಣ ಶುದ್ಧ ಪೂರ್ಣಿಮೆ' ಅದುವೇ 'ಕಾಮನ ಹುಣ್ಣಿಮೆ'ಯಾಗಿ ಇಂದಿಗೂ ಆಚರಿಸಲ್ಪಡುತ್ತಿದೆ.

'ಕಾಮನ ಹುಣ್ಣಿಮೆ'ಯನ್ನು ಜಿಲ್ಲೆಯಾದ್ಯಂತ ಆಚರಿಸಿಕೊಂಡು ಬರುತ್ತಿದ್ದಾರೆ.ಮೂರು ದಿನ, ಐದು ದಿನ, ಏಳು ದಿನ ಒಂಭತ್ತು, ಹನ್ನೊಂದು ದಿನಗಳ ಕಾಲ ಕಾಮನ ಮೂರ್ತಿಯನ್ನು ಪ್ರತಿಷ್ಠಾಪಿಸುವ ಜೊತೆಗೆ ರತಿದೇವಿಯ ಮೂರ್ತಿಯನ್ನು ಪ್ರತಿಷ್ಠಾಪಿಸುವ ಸಂಪ್ರದಾಯ ಕಂಡುಬರುತ್ತದೆ.ದಪ್ಪ ಮೀಸೆ,ಮಂದಸ್ಮಿತ ಮುಖ, ತಲೆಗೆ ಪೇಟ, ಅಗಲವಾದ ಕಣ್ಣುಗಳು, ಕಾಮನನ್ನು ಒಬ್ಬ ಅಮಾಯಕನ ಭಾವದ ಸುಂದರ ವ್ಯಕ್ತಿಯಾಗಿ ಕಾಣಿಸುತ್ತಾರೆ. ಜಾತಿ ವೈಷಮ್ಯ ದ್ವೇಷ–ಅಸೂಯೆಗಳನ್ನು ಮರೆತು ಎಲ್ಲರೂ ಒಂದಾಗಿ ಆಚರಿಸುವ ಹಬ್ಬವಾಗಿ, ತಮ್ಮಲ್ಲಿರುವ ಕೆಟ್ಟ ಕಾಮನೆಗಳನ್ನು ಸುಟ್ಟುಹಾಕುವ ಸಂಭ್ರಮದ ದಿನವಾಗಿ ಎಲ್ಲರೂ ರಂಗು ರಂಗಿನ ಬಣ್ಣಗಳನ್ನು ಎರಚುವ ಮುಖಾಂತರ ಖುಷಿಪಡುತ್ತಾರೆ. ಈ ಸಂದರ್ಭದಲ್ಲಿ ಮೊಸರುಗಡಿಗೆ ಒಡೆಯುವ, ಕೋಲಾಟದ ಹಾಡುಹಾಡುವ, ನೃತ್ಯ ಮಾಡುವ, ನಗಿಸುವ ಹಲವಾರು ಸ್ಪರ್ಧೆ, ಕಾರ್ಯಕ್ರಮಗಳು ಜರುಗುವುವು.ಇವು ಕೂಡ ಪರಸ್ಪರ ಭಾವೈಕ್ಯತೆಯನ್ನು ಮೆರೆಯುವ, ಮನಸ್ಸುಗಳನ್ನು ಬೆಸೆಯುವ ಚಟುವಟಿಕೆಗಳಾಗಿ ಹಬ್ಬಕ್ಕೆ ಮೆರುಗು ತಂದುಕೊಡುತ್ತವೆ.

ಭಾರತೀಯರು ಆಚರಿಸುವ ಇನ್ನೊಂದು ಪವಿತ್ರ ಹಬ್ಬ 'ಮಹಾಶಿವರಾತ್ರಿ'. ಈ ದಿನ ಕೈಲಾಸವಾಸಿ ಪರಶಿವ(ಪರಮಾತ್ಮ)ನನ್ನು ಕೋಟಿ ಕೋಟಿ ಜನ ಪೂಜಿಸುವರು. ಶಿಶಿರ ಋತುವಿನ ಮಾಘಮಾಸದ ಕೃಷ್ಣಪಕ್ಷ ಬಹುಳ ಚತುರ್ದಶಿಯಂದು ಬರುವ ಶಿವರಾತ್ರಿಯ ದಿನ ಭಕ್ತರು ಶಿವನನ್ನು ಭಜಿಸಿ ಅವನ ಕೃಪೆಗೆ ಪಾತ್ರರಾಗುವರು.

ಶಿವ ಸರಳ, ಪ್ರಾಮಾಣಿಕ ಮತ್ತು ನಿಷ್ಕಲ್ಮಷ ಮನಸ್ಸುಗಳ ಪ್ರತೀಕ.ಸಾಮಾನ್ಯವಾಗಿ ಎಲ್ಲಾ ದೇವರುಗಳಿಗೆ ಹಗಲಿನಲ್ಲಿ ಪೂಜೆ ನಡೆದರೆ, ಶಿವರಾತ್ರಿಯಂದು ಶಿವನಿಗೆ ಅಹೋರಾತ್ರಿ ಪೂಜೆ ನೆರವೇರುತ್ತದೆ.ಭಜನೆಗಳು, ಪುರಾಣಗಳನ್ನು ನೆರವೇರಿಸುವರು.ಅಜ್ಞಾನವೆಂಬ ಕತ್ತಲನ್ನು ಸುಜ್ಞಾನದ

ಬೆಳಕಿನ ಮುಖಾಂತರ ಓಡಿಸುವುದೇ ಮಹಾಶಿವರಾತ್ರಿ.ಇಡೀ ದಿನ ಉಪವಾಸ, ಜಾಗರಣೆ ಮಾಡಿ ಶಿವನನ್ನು ಆರಾಧಿಸುವರು.[೫]

ಜಿಲ್ಲೆಯಾದ್ಯಂತ ಶಿವಾಲಯ, ಶಿವಮಂದಿರ, ಈಶ್ವರ ದೇವಸ್ಥಾನ, ಶಿವನಮೂರ್ತಿಗಳು, ಇರುವೆಡೆ ಉತ್ಸವ, ರಥೋತ್ಸವ, ಜಾತ್ರೆಗಳು ನಡೆಯುತ್ತವೆ. ಹಲವು ಕಡೆ ಲಕ್ಷ ದೀಪೋತ್ಸವ ನಡೆಯುತ್ತವೆ.

ಭಾರತೀಯರು ಹೊಸ ವರ್ಷವಾಗಿ ಆಚರಿಸುವ ಚೈತ್ರ ಮಾಸದ ಮೊದಲ ದಿನವೇ 'ಯುಗಾದಿ'.ಉಗಾದಿ ಎಂತಲೂ ಗ್ರಾಮೀಣರು ಕರೆಯುವರು.ಸ್ನಾನ ಮಾಡಿ ಎಲ್ಲರೂ ಹೊಸ ಬಟ್ಟೆ ಧರಿಸುವರು.ರೈತರು ಎತ್ತು ಗಳೇವು ತೆಗೆದುಕೊಂಡು ಹೊಲಕ್ಕೆ ಹೋಗಿ ಒಂದೆರಡು ಸಾಲುಗಳನ್ನು ಉಳುಮೆ ಮಾಡಿ ಭೂಮಿ ಪೂಜೆ ಮಾಡಿ ಚರಗ ಚೆಲ್ಲಿ ಬರುವುದು, ಮನೆಯ ಬಾಗಿಲು, ಕಂಬಗಳಿಗೆ ಮಾವು, ಬೇವಿನ ತೋರಣಗಳನ್ನು ಕಟ್ಟಿ ಸಿಂಗರಿಸುವುದು.

ಯುಗಾದಿ ದಿನ ಸುಖದ ಸಂಕೇತವಾಗಿ ಬೆಲ್ಲವನ್ನು, ಕಷ್ಟದ ಸಂಕೇತವಾಗಿ ಬೇವನ್ನು (ಬೇವಿನ ಹೂ) ಬೆರೆಸಿ ಪರಸ್ಪರ ಹಂಚಿಕೊಂಡು ಸೇವಿಸುತ್ತಾರೆ.ನೂರು ವರುಷಗಳ ಆಯುಷ್ಯ, ಸದೃಢ ಆರೋಗ್ಯ, ಸಕಲ ಸಂಪತ್ತುಗಳ ಪ್ರಾಪ್ತಿಗಾಗಿಯೂ, ಸಕಲ ಅರಿಷ್ಟ ನಿವಾರಣೆಗಾಗಿಯೂ ಬೇವು-ಬೆಲ್ಲವನ್ನು ಸೇವನೆ ಮಾಡುವುದು ಜನಪದರ ಒಂದು ವೈಜ್ಞಾನಿಕ ದೃಷ್ಟಿಕೋನವಾಗಿದೆ.[೬]

ಉತ್ತರಕರ್ನಾಟಕದಲ್ಲಿ ಹಬ್ಬಗಳ ಸರಣಿ ಆರಂಭವಾಗುವುದೇ 'ಕಾರಹುಣ್ಣಿಮೆ'ಯ ಸಂಭ್ರಮದೊಂದಿಗೆ.ಮುಖ್ಯ ಆಕರ್ಷಣೀಯ ಕೇಂದ್ರವೇ ರೈತನ ಸಂಗಾತಿ, ದೈವೀಸಂಭೂತವಾಗಿ ಪೂಜಿಸಿಕೊಂಡು ಬಂದಿರುವ ಎತ್ತುಗಳು.ಮಳೆಗಾಲದ ಆರಂಭದ ಹೊತ್ತಿಗೆ ಎತ್ತುಗಳನ್ನು ಸಿಂಗರಿಸಿ ಪೂಜಿಸಿ ಉಳುಮೆಗೆ ಸಜ್ಜಾಗುವಂತೆ ಪ್ರೇರೆಪಿಸುವುದೇ ಕಾರಹುಣ್ಣಿಮೆಯಲ್ಲಿ.

ಮಣ್ಣಿನ ಮಗ ರೈತನಿಗೆ ತನ್ನ ಎತ್ತುಗಳನ್ನು ಶೃಂಗರಿಸಿ, ಅದರ ಸೌಂದರ್ಯವನ್ನೂ ಅದರ ಬಲವನ್ನೂ ತನ್ನ ಸರೀಕರಿಗೆ ಪ್ರದರ್ಶಿಸುವುದೇ ಒಂದು ಹೆಮ್ಮೆ. ಹಾಗಾಗಿ ಅಂದು ಎತ್ತುಗಳನ್ನು ಮೈದೊಳೆದು, ಕೋಡುಗಳನ್ನು ಕೆತ್ತಿ ನಯಮಾಡಿ, ಕೋಡುಗಳಿಗೆ ಔಡಲ ಎಣ್ಣೆ ಹಚ್ಚಿ ಮಿರಿ ಮಿರಿ ಮಿಂಚುವಂತೆ ಮಾಡಿ ಕಾಲಿನ ಗೊರಸುಗಳಿಗೆ ನಾಲುಗಳನ್ನು ಬಡೆಸಿ, ಮೈಮೇಲೆ ಕಸೂತಿ ಹಾಕಿದ ಜೂಲು ಹಾಕಿ, ಕೋಡುಗಳಿಗೆ ಕೊಂಬಣಸು, ರಿಬ್ಬನ್ನು ಬಣ್ಣವನ್ನು ಲೇಪಿಸಿ ಕೊರಳಿಗೆ ಗೆಜ್ಜೆಪಟ್ಟಿ, ಕಂಬಳಿ ಕರಿ, ಕಾಲುಗಳಿಗೆ ಚಿಕ್ಕ ಚಿಕ್ಕ ಗೆಜ್ಜೆಪಟ್ಟಿಗಳನ್ನು ಕಟ್ಟಲಾಗಿರುತ್ತದೆ. ಈ

---

೫. ನೋಡಿ :ಮಹಾಶಿವರಾತ್ರಿ-ಲೇಖನ :www.bangalorewaves.com

೬. ನೋಡಿ : ಯುಗಾದಿ-ಲೇಖನ : http://kn.m.wikipedia.org

ಶೃಂಗಾರ ಮಾಡುವ ಕಲೆಯು ಎತ್ತುಗಳ ಜೊತೆಗಿನ ಆತನ ಭಾವನಾತ್ಮಕ ಸಂಬಂಧವನ್ನು ತೋರಿಸುತ್ತದೆ.ಈ ಶೃಂಗಾರದಲ್ಲಿ ಎಂಥ ಬಡಪಾಯಿ ಬಡಕಲು ಎತ್ತು ಕೂಡ ತುಂಬ ಸುಂದರವಾಗಿ ಕಾಣುತ್ತಿರುತ್ತದೆ. ಹಾಗಾಗಿಯೇ 'ಕಾರಹುಣ್ಣಿವ್ಯಾಗ ಎತ್ತು ಕೊಂಬಾಕ ಹೋಗಬಾರ್ದು....' ಅನ್ನೋ ಗಾದೆ ಹುಟ್ಟಿಕೊಂಡಿದೆ ಎತ್ತುಗಳ ಸಿಂಗಾರವನ್ನು ಪುರುಷರು ಮಾಡಿದರೆ, ಮನೆಯಲ್ಲಿ ಬಾಗಿಲಿಗೆ ತೋರಣ ಕಟ್ಟುವುದು, ಬಾಗಿಲ ಪರದೆಗಳನ್ನು ಹಾಕುವುದು, ರಂಗೋಲಿ ಹಾಕುವುದು, ವಿವಿಧ ರೀತಿಯ ಭಕ್ಷ್ಯಭೋಜ್ಯಗಳನ್ನು ತಯಾರು ಮಾಡುವುದು ಮಹಿಳೆಯರು.

ಈ ಹಬ್ಬಗಳು ಜನಪದ ಅಡುಗೆ ಪದ್ಧತಿ, ಹೆಣಿಕೆ ಕಸೂತಿ, ಕಲೆಗಾರಿಕೆಯಂಥ ಸೃಜನಶೀಲ ಚಟುವಟಿಕೆಗಳನ್ನು ನವೀಕರಿಸುವ, ಪ್ರಸ್ತುತಪಡಿಸುವ ಮತ್ತು ಪ್ರದರ್ಶನಕ್ಕೆ ಒಳಪಡಿಸುವ ವೇದಿಕೆಗಳಾಗಿ ಕೆಲಸ ಮಾಡುತ್ತವೆ ಎಂಬುದನ್ನು ಇಲ್ಲಿ ಕಾಣಬಹುದು.

'ಹದವಾದ ಮಳೆಯಾಗಿ ರೈತ ಮುಂಗಾರಿನ ಬಿತ್ತನೆಗೆ ಸಜ್ಜಾಗುತ್ತಾನೆ. ಆತನ ಕೆಲಸವನ್ನು ಹುರಿದುಂಬಿಸಲು ಮಣ್ಣೆತ್ತಿನ ಅಮವಾಸ್ಯೆ ಹಬ್ಬದ ರೂಪದಲ್ಲಿ ಕಾಲಿಡುತ್ತದೆ.ಮುಂಗಾರು ಹಂಗಾಮಿನಿಂದ ಹಿಡಿದು ಹಿಂಗಾರು ಹಂಗಾಮಿನವರೆಗೆ ಬೆಳೆಗಳು ಹುಲುಸಾಗಿ ಬರಲಿ ಎಂದು ಉತ್ತರ ಕರ್ನಾಟಕದ ರೈತರು ಐದು ಬಗೆಯ 'ಮಣ್ಣಿನ ಹಬ್ಬ'ಗಳನ್ನು ಆಚರಿಸುತ್ತಾರೆ.ಮಣ್ಣೆತ್ತಿನ ಅಮವಾಸ್ಯೆಯಿಂದ ಆರಂಭವಾದ ಮಣ್ಣಿನ ಹಬ್ಬಗಳು ನಂತರ ಗುಳ್ಳವ್ವ, ನಾಗರಪಂಚಮಿ, ಗಣೇಶ ಚತುರ್ಥಿ, ಜೋಕುಮಾರನ ಹಬ್ಬವನ್ನು ಆಚರಿಸುವ ಮೂಲಕ ಕೊನೆಯಾಗುತ್ತದೆ.ಜೇಷ್ಠ ಬಹುಳ ಅಮವಾಸ್ಯೆಯೇ ಮಣ್ಣೆತ್ತಿನ ಅಮವಾಸ್ಯೆಯಾಗಿದ್ದು, ರೈತ ಇದರ ಆಚರಣೆಯಲ್ಲಿ ಸಜ್ಜಾಗುತ್ತಾನೆ.[೭]

ಕಾರಹುಣ್ಣಿಮೆಯಲ್ಲಿ ಎತ್ತುಗಳನ್ನು ಸಿಂಗರಿಸಿ ಪೂಜಿಸಿದರೆ ಈ ಅಮವಾಸ್ಯೆಯಲ್ಲಿ ತನ್ನ ಜೊತೆಗಾರನಾಗಿ ದುಡಿದ ನಿಸ್ವಾರ್ಥ ಸೇವೆಯ ಎತ್ತುಗಳ ಮಣ್ಣಿನ ಮೂರ್ತಿಯನ್ನು ಮಾಡಿ ಪೂಜಿಸುವುದು ಎತ್ತುಗಳಿಗೆ ರೈತನು ಸಲ್ಲಿಸುವ ಕೃತಜ್ಞತೆ ಎನ್ನಬೇಕು. ಮನೆಮನೆಗಳಲ್ಲಿ ಹುತ್ತದ ಮಣ್ಣಿನಿಂದ ಎತ್ತುಗಳ ಶಿಲ್ಪಗಳನ್ನು ಸುಂದರವಾಗಿ ತಾವೇ ಕೈಯಾರೆ ಮಾಡಿ ದೇವರ ಜಗುಲಿಯ ಮೇಲಿಟ್ಟು ಪೂಜಿಸಿ ಎಡೆ ಹಿಡಿಯುತ್ತಾರೆ.ಇತ್ತ ಜೀವಂತ ಎತ್ತುಗಳ ಮೈದೊಳೆದು ಕೋಡು, ಮೈಮೇಲೆ ಬಣ್ಣದಿಂದ ಚಿತ್ರ ಬರೆದು ಸಿಂಗರಿಸುತ್ತಾರೆ.ಅವುಗಳಿಗೂ ಪೂಜೆ ಸಲ್ಲಿಸಿ ಎಡೆ ಹಿಡಿದ ನೈವೇದ್ಯವನ್ನು, ಉಸುಳಿಯನ್ನು ತಿನ್ನಲು ಕೊಡುತ್ತಾರೆ. ಮಾರನೇ ದಿನ ಮಣ್ಣಿನ ಎತ್ತುಗಳನ್ನು ಮಕ್ಕಳು ಮನೆಮನೆಗೆ ಕೊಂಡು ಹೋಗಿ 'ಅಕ್ಕಿ ಹೇರ್.....ಜ್ವಾಳಾ ಹೇರ್.... ರಾಗಿ ಹೇರ್. .'

---

೭. ನೋಡಿ: ಬಿತ್ತನೆಗೆ ಹುರಿದುಂಬಿಸುವ ಮಣ್ಣೆತ್ತಿನ ಅಮವಾಸ್ಯೆ–ಲೇಖನ :vijaykarnataka.indiatimes.com>belagavi

ಎಂದು ಹಾಡುತ್ತಾ ಧನಧಾನ್ಯಗಳನ್ನು ಸ್ವೀಕರಿಸಿ, ಅದನ್ನು ಮಾರಿ ಬಂದ ಹಣದಲ್ಲಿ ತಿಂಡಿತಿನಿಸು ತಿಂದು ಊರಿನ ಕೆರೆ ಹಳ್ಳಗಳಲ್ಲಿ ಮಣ್ಣೆತ್ತುಗಳನ್ನು ವಿಸರ್ಜಿಸುತ್ತಾರೆ.

ಕರ್ನಾಟಕದಾದ್ಯಂತ ದೊಡ್ಡ ಹಬ್ಬವೆಂದೇ ಖ್ಯಾತಿ ಪಡೆದ 'ನಾಗರ ಪಂಚಮಿ'ಯನ್ನು ಪ್ರತಿ ವರ್ಷ ಶ್ರಾವಣ ಮಾಸದ ಶುಕ್ಲ ಪಕ್ಷದ ಐದನೇ ದಿನ ಆಚರಿಸಲಾಗುತ್ತದೆ.ಈ ಹಬ್ಬಕ್ಕೆ ತನ್ನದೇ ಆದ ವೈಶಿಷ್ಟ್ಯವಿದ್ದು, ಭಾರತದ ಹಲವು ಭಾಗಗಳಲ್ಲಿ ಹಿಂದೂಗಳು ಆಚರಿಸುತ್ತಾರೆ.ಈ ದಿನ ಹಾವಿಗೆ ಅಥವಾ ಕಲ್ಲು ನಾಗನಿಗೆ ಹಾಲೆರೆದು, ಪೂಜಿಸಿ ಸಕಲ ಇಷ್ಟಾರ್ಥಗಳು ಪ್ರಾಪ್ತಿಯಾಗಲೆಂದು ನಾಗದೇವನನ್ನು ಬೇಡಿಕೊಳ್ಳುವರು.

ಪುರಾಣ ಕಥೆಯೊಂದರ ಪ್ರಕಾರ ಹಾವು ಕಚ್ಚಿ ಸಾವಿಗೀಡಾದ ತನ್ನ ಸಹೋದರರನ್ನು ಸಹೋದರಿಯೊಬ್ಬಳು ಬದುಕಿಸಿಕೊಂಡ ದಿನವೇ ಶ್ರಾವಣಮಾಸದ ಶುಕ್ಲ ಪಕ್ಷದ ಪಂಚಮಿಯಾಗಿತ್ತು. ಹಾವನ್ನು ಭಕ್ತಿಭಾವದಿಂದ ಪೂಜಿಸಿ ತನ್ನ ಅಣ್ಣನನ್ನು ತಂಗಿ ಬದುಕಿಸಿಕೊಂಡ ದಿನವನ್ನು ಭ್ರಾತೃತ್ವದ ಸಂಕೇತವಾಗಿಯೂ ಕೆಲವೆಡೆ ಆಚರಿಸಲಾಗುತ್ತದೆ. ಹಾಗಾಗಿ ಇದು ಅಣ್ಣ-ತಂಗಿ ಇಬ್ಬರೂ ಸೇರಿ ಪೂಜಿಸಲ್ಪಡುವ ಹಬ್ಬವೆಂದು ಪ್ರತೀತಿ ಇದೆ.

ಉತ್ತರ ಕರ್ನಾಟಕದಾದ್ಯಂತ ನಾಗರಪಂಚಮಿ ಪ್ರಯುಕ್ತ ಮದುವೆಯಾಗಿ ಗಂಡನ ಮನೆಯಲ್ಲಿರುವ ಸಹೋದರಿಯರನ್ನು ತವರು ಮನೆಗೆ ಅಣ್ಣನಾದವನು ಕರೆದುಕೊಂಡು ಬರುವ ಸಂಪ್ರದಾಯವಿದೆ.ಗೃಹಿಣಿಯರು ಬೆಳಿಗ್ಗೆಯಿಂದ ಹಬ್ಬದಡುಗೆ ಮಾಡಿ, ಸ್ನಾನಾದಿಗಳನ್ನು ಮುಗಿಸಿ ಮಕ್ಕಳೊಂದಿಗೆ ಹೊಸ ಬಟ್ಟೆ ತೊಟ್ಟು ಕಲ್ಲುನಾಗರ ಮೂರ್ತಿಗಳಿಗೆ, ಹುತ್ತಗಳಿಗೆ ಹಾಲೆರೆದು ಪೂಜಿಸುವರು.ಹಬ್ಬದಡುಗೆಯಾಗಿ ಸಿಹಿಯಾದ ಶೇಂಗಾ, ದಾಣಿ, ಗುಳಿಗಿ, ಎಳ್ಳು, ಅಳ್ಳಿಟ್ಟಿನಿಂದ ಮಾಡಿದ ಉಂಡೆಗಳನ್ನು ಮಾಡಿ ಎಲ್ಲರೂ ಸವಿಯುವರು.

ವಿಶೇಷವಾಗಿ ಈ ಹಬ್ಬ ಹೆಣ್ಣುಮಕ್ಕಳಿಗಾಗಿಯೇ ಮೀಸಲಾದ ಹಬ್ಬವೆಂದು ಹೇಳಬೇಕು. ಜೋಕಾಲಿ ಜೀಕುವುದು, ಹೊಸ ಬಟ್ಟೆ ತೊಟ್ಟು ನಲಿಯುವುದು, ಬಾಲ್ಯದ ಗೆಳತಿಯರೊಂದಿಗೆ ಮತ್ತೆ ನೆನಪುಗಳನ್ನು ಹಂಚಿಕೊಳ್ಳುವುದು ಮಾಡಲು ಹೇಳಿ ಮಾಡಿಸಿದ ಹಬ್ಬ. ಈ ಹಬ್ಬಗಳಲ್ಲಿ ಗಂಡನ ಮನೆಗೆ ಹೋಗಿದ್ದ ಎಲ್ಲ ಹೆಣ್ಣುಮಕ್ಕಳು (ಗೆಳತಿಯರು) ಮತ್ತೆ ತಮ್ಮೂರಿನಲ್ಲಿ (ತವರಿನಲ್ಲಿ) ಸೇರುವುದರಿಂದ ಅವರಿಗೆ ತಮ್ಮ ನೆನಪುಗಳನ್ನು, ಭಾವನೆಗಳನ್ನು, ಆಸರಿಕೆ-ಬೇಸರಿಕೆಗಳನ್ನು ಹಂಚಿಕೊಳ್ಳಲು ಒಂದು ವಿಶಿಷ್ಟವಾದ ವೇದಿಕೆಯಾಗಿ ಈ ಹಬ್ಬ ಆಚರಿಸಲ್ಪಡುತ್ತದೆ.

ಹೆಣ್ಣುಮಕ್ಕಳು ಆಚರಿಸುವ ಹಬ್ಬಗಳ ಪೈಕಿ ವಿಶೇಷವಾಗಿ 'ರಕ್ಷಾಬಂಧನ'ವೂ ಕೂಡಾ ಒಂದಾಗಿದ್ದು, ಧಾರ್ಮಿಕ ಆಚರಣೆಗಳ ಜೊತೆಗೆ ಅಣ್ಣ-ತಂಗಿಯರ ಮಧ್ಯೆ ಪರಸ್ಪರ ಬಾಂಧವ್ಯ

ಬೆಸೆಯುವ ಹಬ್ಬ ಇದು. ಪ್ರತಿ ವರ್ಷ 'ನೂಲು ಹುಣ್ಣಿಮೆ'ಯ ದಿನದಂದು ಆಚರಿಸಲಾಗುತ್ತದೆ.ಅಂದು ಸಹೋದರಿಯರು ತಮ್ಮ ಸಹೋದರರಿಗೆ ರಾಕಿ (ರಕ್ಷಾಬಂಧನ) ಗಳನ್ನು ಶ್ರೀಕೃಷ್ಣನ ಮುಂದೆ ಇರಿಸಿ ಪೂಜಿಸಿ 'ತಮ್ಮ ಸಹೋದರರನ್ನು ಅನವರತ ರಕ್ಷಿಸು' ಎಂದು ಬೇಡಿಕೊಳ್ಳುತ್ತಾರೆ.ನಂತರ ಸಹೋಧರನ ಹಣೆಗೆ ತಿಲಕವಿಟ್ಟು ಅಕ್ಷತೆ ಹಾಕಿ ರಕ್ಷಾಬಂಧನವನ್ನು ಆರತಿ ಮಾಡುತ್ತಾರೆ.ಸಹೋದರಿಯ ಈ ಪ್ರೀತಿಗೆ ಪ್ರತಿಯಾಗಿ ಸಹೋದರನು ಎಲ್ಲಾ ರೀತಿಯಲ್ಲೂ ನಿನ್ನ ರಕ್ಷಣೆಯ ಹೊಣೆ ನನ್ನದೆಂದು ಪುಟ್ಟ ಕಾಣಿಕೆಯನ್ನು ನೀಡುವುದು ಹಬ್ಬದ ವಾಡಿಕೆಯಾಗಿದೆ.

ರಕ್ಷಾಬಂಧನವು ಬರೀ ಒಂದು ಆಚರಣೆಯಲ್ಲ. ಇದು ಸಂಬಂಧಗಳನ್ನು ಬೆಸೆಯುವ ಭರವಸೆಯ ಆಶಾಕಿರಣವನ್ನು ಮೂಡಿಸಿ ಹೆಣ್ಣಿನ ರಕ್ಷಣೆಗೆ ನಮ್ಮ ಹಿರಿಯರು ರೂಢಿಸಿಕೊಟ್ಟ ಜವಾಬ್ದಾರಿಯ ಕೆಲಸ.

ಭಾರತದಲ್ಲಿ ವೈಭವದಿಂದ ಆಚರಿಸಲ್ಪಡುವ ಒಂದು ಹಬ್ಬ ಗಣೇಶ ಚತುರ್ಥಿ. ಪ್ರತಿ ವರ್ಷ ಭಾದ್ರಪದ ಮಾಸದ ಶುಕ್ಲ ಪಕ್ಷದ ಚೌತಿ(ಚತುರ್ಥಿ)ಯ ದಿನ ಈ ಹಬ್ಬವನ್ನು ಆಚರಿಸುವರು. ಬೆಳ್ಳಿ ಅಥವಾ ಮಣ್ಣಿನಿಂದ ಮಾಡಿದ ಗಣಪತಿಯ ಮೂರ್ತಿಯನ್ನು ವಿದ್ಯುಕ್ತವಾಗಿ ಪೂಜಿಸಿ, ವ್ರತವೆಂದು ಆಚರಿಸಲಾಗುತ್ತದೆ.

ಕೃಷಿ ಭೂಮಿಯಲ್ಲಿ ಬೆಳದ ಬೆಳೆಗಳನ್ನು ಆನೆಗಳ ಹಿಂಡು ನುಗ್ಗಿ ಹಾನಿ ಮಾಡುವುದನ್ನು ತಡೆಯಲು ರೈತಾಪಿ ಜನಗಳು ಆನೆಯ ಮುಖವುಳ್ಳ ದೈವವನ್ನು ಸೃಷ್ಟಿಸಿ ಪೂಜಿಸತೊಡಗಿದರು.ಹಾಗೆಯೇ ಗೋದಾಮುಗಳಲ್ಲಿ ಧಾನ್ಯಗಳನ್ನು ತಿಂದು ಹಾಳು ಮಾಡುವ ಇಲಿಗಳನ್ನು ಪೂಜಿಸುವ ಮುಖಾಂತರ ಗಣಪತಿಯ ವಾಹನವಾದ ಇಲಿಯನ್ನು ಸಮಾಧಾನಿಸುವುದು ಈ ಹಬ್ಬವು ಹುಟ್ಟಿಕೊಳ್ಳಲು ಕಾರಣವಾಯಿತೆಂದು ಹೇಳುವರು.

ಇತ್ತೀಚೆಗಂತೂ ಹಳ್ಳಿಗಳಿಂದ ಹಿಡಿದ ನಗರ ಪ್ರದೇಶದ ಗಲ್ಲಿ ಗಲ್ಲಿಗಳಲ್ಲೂ ದೊಡ್ಡ ದೊಡ್ಡ ಗಣಪತಿ ವಿಗ್ರಹ, ಮಣ್ಣಿನಮೂರ್ತಿಗಳನ್ನು ಪ್ರತಿಷ್ಠಾಪಿಸುವುದು ಒಂದು ಶೋಕಿತನವಾಗಿ ಮಾರ್ಪಟ್ಟಿರುವುದನ್ನು ಕಾಣಬಹುದು.

'ವಿಜಯದಶಮಿ' ನವರಾತ್ರಿ ಉತ್ಸವದ ಕೊನೆಯ ದಿನವಾಗಿದ್ದು, ಈ ದಿನದಂದು ಪಾಂಡವರು ಶತ್ರುಗಳ ಮೇಲೆ ವಿಜಯ ಸಾಧಿಸಿದ ದಿನವಾಗಿದ್ದು, 'ದಶಮಿ' ಎಂದರೆ ಹತ್ತನೇ ದಿನ ಅಂದರೆ ದಸರಾ ಉತ್ಸವದ ಹತ್ತನೇ ದಿನ. ದಸರಾ ಎಂದೇ ಪ್ರಸಿದ್ಧಿಯಾಗಿರುವ

ಶಕ್ತಿಪೂಜೆಯ ಶರನ್ನವರಾತ್ರಿಗಳ ನಂತರದ 'ವಿಜಯೋತ್ಸವ ದಿನ'.ಉತ್ತರ ಭಾರತದ ಕೆಲವೆಡೆ ಈ ದಿನವನ್ನು ಹೊಸ ವರ್ಷದ ದಿನವೆಂದು ಆಚರಿಸುವ ಪದ್ಧತಿ ಇದೆ.

ಧಾರವಾಡದ ದಸರಾ ಉತ್ಸವವೂ ಕೂಡ ಮೈಸೂರು ದಸರಾ ಉತ್ಸವದಂತೆ ಪ್ರಸಿದ್ಧವಾಗಿದೆ.ಇಲ್ಲಿನ ಲಕ್ಷ್ಮೀಗೆ ನಾರಾಯಣ ದೇವಸ್ತಾನದಲ್ಲಿ ಹತ್ತು ದಿನಗಳವರೆಗೆ ವಿಜೃಂಭಣೆಯಿಂದ ಉತ್ಸವ ಜರುಗುತ್ತದೆ.ಇದು 'ಲಕ್ಷ್ಮೀ ನಾರಾಯಣ ಜಾತ್ರೆ' ಎಂದೇ ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದಿದೆ.ರವಿವಾರ ಪೇಟೆಯಲ್ಲಿ ೧೯೧೩ರಲ್ಲಿ ಜೈಪುರದಿಂದ ತರಿಸಿದ ಲಕ್ಷ್ಮಿನಾರಾಯಣ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಯಿತು. ರಾಷ್ಟ್ರೀಯ ಭಾವೈಕ್ಯತೆ ಬೆಳೆಸುವಲ್ಲಿ ಮೈಸೂರು ದಸರಾ ತರಹ  ದೇವಸ್ಥಾನದಲ್ಲಿ 'ದಸರಾ ಉತ್ಸವ' ಪ್ರಾರಂಭಿಸಲಾಯಿತು.[೮]

ದಸರಾ ಉತ್ಸವದೊಂದಿಗೆ ಕಳೆದ ಹದಿನೈದು ವರ್ಷಗಳಿಂದ ಜಂಬೂಸವಾರಿ ಮೆರವಣಿಗೆಯನ್ನು ನಡೆಸಿಕೊಂಡು ಬರಲಾಗುತ್ತಿದೆ.ಸಾರಸ್ವತಪುರ ಗೌಳಿಗಲ್ಲಿಯ ಮಾರುತಿ ದೇವಸ್ಥಾನದಿಂದ ಹೊರಡುವ ಜಂಬೂ ಸವಾರಿಯು ಸುಭಾಷರಸ್ತೆ ಮಾರ್ಗವಾಗಿ ಮುರುಘಾಮಠಕ್ಕೆ ತಲುಪಿ ಮಲ್ಲಿಕಾರ್ಜುನ ಸ್ವಾಮೀಜಿಯವರ ಸಾನಿಧ್ಯದಲ್ಲಿ ಬನ್ನಿಮುಡಿಯುವ ಮುಖಾಂತರ ಮೆರವಣಿಗೆ ಕೊನೆಗೊಳ್ಳುವುದು.

ಈ ಸಂದರ್ಭದಲ್ಲಿ ಮಾತು ಬಿಟ್ಟವರು, ವೈಷಮ್ಯ ಮರೆತು ಪರಸ್ಪರ 'ಬನ್ನಿ' ವಿನಿಮಯ ಮಾಡಿಕೊಳ್ಳುವ ಮುಖಾಂತರ ಮತ್ತೆ ಒಂದಾಗುತ್ತಾರೆ.ಭಾವೈಕ್ಯತೆಯನ್ನು ಬೆಸೆಯುವ ಒಂದು ವಿಶಿಷ್ಟ ಹಬ್ಬ ವಿಜಯದಶಮಿ ಎಂದರೆ ತಪ್ಪಾಗಲಾರದು.

ತ್ಯಾಗ-ಬಲಿದಾನದ ಸಂಕೇತವಾದ 'ಮೊಹರಂ ಆಚರಣೆ'ಯು ಉತ್ತರಕರ್ನಾಟಕದಲ್ಲೆಡೆ ನಡೆದುಕೊಂಡು ಬರುತ್ತಿರುವ ಹಿಂದೂ-ಮುಸ್ಲಿಂ ಭಾವೈಕ್ಯದ ಹಬ್ಬ. ಸುಮಾರು ೧೪೦೦ ವರ್ಷಗಳ ಹಿಂದೆ ಪ್ರವಾದಿ ಮಹ್ಮದ್ ಪೈಗಂಬರ್‌ನ ಮೊಮ್ಮಗ ಇಮಾಮ್-ಹುಸೇನ್‌ರು ಶ್ರೀಮಂತರ ದಬ್ಬಾಳಿಕೆಯ ವಿರುದ್ಧ ದನಿ ಎತ್ತಿ, ಅವರ ಕ್ರೂರತನಕ್ಕೆ ಹಲವಾರು ಜೀವಗಳು ಬಲಿದಾನಗೈದ ಶೋಕಾಚರಣೆಯೇ ಈ 'ಮೊಹರಂ ದಿನ'. ಗ್ರಾಮೀಣ ಭಾಗದಲ್ಲಿ 'ಅಲಾಯಿ ಹಬ್ಬ'ವೆಂದೇ ಕರೆಯಿಸಿಕೊಳ್ಳುವ ಮೊಹರಂ ಶಾಂತಿ, ಸೌಹಾರ್ಧತೆಯನ್ನು ಸಾಧಿಸುತ್ತದೆ.

ಅಲಾಯಿ ಅಥವಾ ಅಲ್ಲಾ ದೇವರಿಗೆ ನಮಿಸಿ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿ ಬೇಡಿಕೊಳ್ಳುವರು. ಹುಲಿವೇಷವನ್ನು ಬಣ್ಣಗಳಿಂದ ಮೈಮೇಲೆ ಬರೆಸಿಕೊಂಡು ಹರಕೆ ತೀರಿಸುವುದು, ಅಲಾಯಿ ಪದಗಳ ಮುಖಾಂತರ ಮೊಹರಂ ವಿಶೇಷವನ್ನು ಹೊಗಳುವುದು ಈ

---

೮. ನೋಡಿ: ಪ್ರಜಾವಾಣಿ-ಮೆಟ್ರೊ : ೦೪-೧೦-೨೦೧೧

ಹಬ್ಬದ ವಿಶೇಷವಾಗಿದ್ದು, ಜಾತಿ-ಬೇಧವೆನ್ನದೇ ಎಲ್ಲರೂ ಮೊಹರಂ ಹಬ್ಬದಲ್ಲಿ ಪಾಲುಗೊಳ್ಳುವರು.

'ಶೀಗೆ ಹುಣ್ಣಿಮೆ' ಹಚ್ಚ ಹಸಿರಿನಿಂದ ಮೈದುಂಬಿ ನಿಂತ ಭೂತಾಯಿಗೆ ಸೀಮಂತ ಮಾಡುವ ಜನಪದರ ಸಂಪ್ರದಾಯದ ಹಬ್ಬ. ಮುಂಗಾರಿನ ಫಸಲು ಮನೆ ತುಂಬಿಕೊಳ್ಳುವ ಮತ್ತೆ ಹಿಂಗಾರಿನ ಬೆಳೆಗಾಗಿ ಭೂಮಿ ಸಿದ್ಧತೆ ಮಾಡಿಕೊಳ್ಳುವ ಸಂದರ್ಭದಲ್ಲಿ ಫಸಲನ್ನು ಪೂಜಿಸುವ ಮತ್ತು ಮುಂದಿನ ಫಸಲು ಉತ್ತಮವಾಗಲೆಂಬಪೂರ್ವಜರ ನಂಬಿಕೆಯಂತೆ ಭೂಮಿಯನ್ನು ಪೂಜಿಸುವ ರೈತಕುಲದ ತಾಯ್ನೆಲದ ಪೂಜೆಯೇ ಈ ಹಬ್ಬ.

ಮಹಿಳೆಯರು ಎಣ್ಣೆ ಹೋಳಿಗೆ, ಶೇಂಗಾ ಹೋಳಿಗೆ, ಕರಿಗಡಬು ಎಳ್ಳು ಹಚ್ಚಿದ ರೊಟ್ಟಿ, ಎಣ್ಣೆಗಾಯಿ, ಮೊಸರುಗಾಯಿ, ಪುಂಡಿಪಲ್ಯೆ, ಕಾಳು ಪಲ್ಯ, ಹಪ್ಪಳ-ಸೆಂಡಿಗೆ, ಸಾರು ಮುಂತಾದ ಬಾಯಿ ನೀರೂರಿಸುವ ಅಡುಗೆಯನ್ನು ತಯಾರಿಸಿಕೊಂಡು ಚಿತ್ರ ಬರೆದ ಎಣ್ಣೆಬುಟ್ಟಿಯಲ್ಲಿ ತುಂಬಿಕೊಂಡು ತಲೆ ಮೇಲಿಟ್ಟುಕೊಂಡು ಹೊಲಕ್ಕೆ ಸಾಗುವರು. ಮನೆಮಂದಿಯೆಲ್ಲ ಚಕ್ಕಡಿ ಕಟ್ಟಿಕೊಂಡು ಹೊಲಕ್ಕೆ ಸಾಗಿ ಬೆಳೆದುನಿಂತ ಬೆಳೆಗೆ ಪೂಜೆ ಸಲ್ಲಿಸಿ, ಪಾಂಡವರ ಮೂರ್ತಿಗಳನ್ನು (ಐದು ಕಲ್ಲುಗಳನ್ನು) ಇಟ್ಟು ಪೂಜಿಸಿ ನೈವೇದ್ಯಗಳನ್ನು ಹೊಲದ ತುಂಬೆಲ್ಲ 'ಹುಲ್ಲು ಹುಲ್ಲಿಗೋ... ಸಲಾಂಬರಿಗೋ...ಎಂದು ಚರಗ ಚೆಲ್ಲುವರು.ಬಳಿಕ ಒಟ್ಟಾಗಿ ಕೂತು ಭೋಜನ ಸೇವಿಸುವರು.

ದೀಪಗಳ ಹಬ್ಬ ದೀಪಾವಳಿ ಹಬ್ಬವನ್ನು ವಿಕ್ರಮಶಕೆಯ ವರ್ಷದ ಕೊನೆಯಲ್ಲಿ ಆಚರಿಸುವರು. ವಿಕ್ರಮಶಕೆ ಉತ್ತರ ಭಾರತದಲ್ಲಿ ಉಪಯೋಗಿಸಲ್ಪಡುವುದರಿಂದ ಅಲ್ಲಿ ದೀಪಾವಳಿಯು ಹೊಸ ವರ್ಷದ ಹಬ್ಬವಾಗಿಯೂ ಆಚರಣೆಯಾಗುತ್ತದೆ. ಹಿಂದೂಧರ್ಮದ ಜನರು ಪ್ರತಿ ವರ್ಷವೂ ಪ್ರಪಂಚದಾದ್ಯಂತ ವಿಜೃಂಭಣೆಯಿಂದ ಆಚರಿಸುವ ಹಬ್ಬ. ಹೊಸ ಬಟ್ಟೆ ಸಿಹಿ ತಿಂಡಿಗಳು ಎಲ್ಲಕ್ಕೂ ಹೆಚ್ಚಾಗಿ ಪಟಾಕಿಗಳಿಗೆ ದೀಪಾವಳಿ ಪ್ರಸಿದ್ಧ.

ಬಲಿಪಾಡ್ಯಮಿಯಂದು ಹಸು, ಎತ್ತುಗಳ ಪೂಜೆ, ಗೋವರ್ಧನ ಬೆಟ್ಟದ ಪೂಜೆ ಸಲ್ಲಿಸುವರು. ಈ ಸಂದರ್ಭದಲ್ಲಿ 'ಹಟ್ಟಿ ಪೂಜೆ' ಅಥವಾ 'ಹಟ್ಟಿಹಬ್ಬ' ಎಂದು ಮಾಡುವ ಆಚರಣೆಯು ವಿಶಿಷ್ಟವಾಗಿದ್ದು, ದನದ ಕೊಟ್ಟಿಗೆಯಲ್ಲಿ ದನದ ಸೆಗಣಿಯಿಂದ ಲಕ್ಕವ್ವ (ಲಕ್ಷ್ಮೀ)ನ ಮೂರ್ತಿಯನ್ನು ಮಾಡಿ, ಅದರ ಸುತ್ತಲೂ ಕೋಟೆ, ಸೈನಿಕರು ಮುಂತಾದ ಶಿಲ್ಪಗಳನ್ನು ಸೆಗಣಿಯಿಂದಲೇ ಮಾಡುವರು. ಜನಪದರು ದನಗಳ ಸೆಗಣಿಯನ್ನು 'ಲಕ್ಷ್ಮೀ' ಎಂದು ನಂಬಿಕೊಂಡು ಬಂದಿರುವರು. ಅದು ರೋಗನಿರೋಧಕವಾಗಿಯೂ ಬಳಸಲ್ಪಡುತ್ತಿರುವುದು ಜನಪದರ ವೈಜ್ಞಾನಿಕ ದೃಷ್ಟಿಕೋನಕ್ಕೆ ಸಾಕ್ಷಿಯಾಗಿದೆ.

ಸೆಗಣಿಯನ್ನು ಕೈಗಳಿಂದ ಮುಟ್ಟಿ ತಟ್ಟಿ ಮೂರ್ತಿ ಮಾಡಿ ಪೂಜಿಸುವ ಮುಖಾಂತರ ರೈತ ಸಂಗಾತಿಯಾಗಿರುವ ಪ್ರಾಣಿಗಳ ಕುರಿತಾಗಿ ಅವರಲ್ಲಿ ಪೂಜನೀಯ ಭಾವನೆ, ಅವುಗಳ ಪಾಲನೆ ಪೋಷಣೆಯ ಜವಾಬ್ದಾರಿಯನ್ನು ಎಚ್ಚರಿಸುವುದು ಇಂಥ ಹಬ್ಬಗಳ ಮೂಲ ಉದ್ದೇಶವಾಗಿದೆ.

ಉತ್ತರ ಕರ್ನಾಟಕದ ಗ್ರಾಮೀಣ ಹೆಣ್ಣಮಕ್ಕಳಿಗೆ ಸಂಭ್ರಮ ಸಡಗರದ ಹಬ್ಬವೆಂದರೆ ಗೌರಿಹುಣ್ಣಿಮೆ, ಹೆಣ್ಣುಮಕ್ಕಳು ವಾರಪೂರ್ತಿ ಸೀರೆ ಉಟ್ಟು, ಬಾಲಕಿಯರು ಹೊಸ ಬಟ್ಟೆ ಧರಿಸಿ ಸಂತಸದಿಂದ ನಲಿದಾಡುವ ಗೌರಿಹುಣ್ಣಿಮೆಯನ್ನು ಕಣ್ತುಂಬಿಕೊಳ್ಳುವುದೇ ಚೆಂದ.ಗ್ರಾಮೀಣ ಪ್ರದೇಶದ ಕೆಲ ಮನೆಗಳಲ್ಲಿ ಪ್ರತಿಷ್ಠಾಪಿಸುವ ಗೌರಮ್ಮನ ವಿಗ್ರಹಕ್ಕೆ ಹುಣ್ಣಿಮೆಯ ರಾತ್ರಿ ಸಕ್ಕರೆ ಬೊಂಬೆಗಳಿಂದ ಆರತಿ ಬೆಳಗಿ, ತಟ್ಟೆಯಲ್ಲಿ ದೀಪವಿಟ್ಟುಕೊಂಡು ಮನೆಮನೆಗೆ ಹೋಗಿ ಕೋಲು ಹಾಕುತ್ತ ಹಾಡುತ್ತ ಕುಣಿಯುತ್ತ ಸಂಭ್ರಮಿಸುವರು.

ಈ ಸಕ್ಕರೆ ಗೊಂಬೆಗಳ ವೈಶಿಷ್ಟ್ಯವೆಂದರೆ ಕನ್ಯೆಯನ್ನು ಖಾಯಂ ಮಾಡಿಕೊಂಡ ವರನ ಮನೆಯವರು ಕನ್ಯೆಯ ಮನೆಗೆ ಗೌರಿಹುಣ್ಣಿಮೆಯಂದು ದಂಡೆಯ ಜೊತೆಗೆ ಸಕ್ಕರೆಗೊಂಬೆಗಳನ್ನು ತೆಗೆದುಕೊಂಡು ಬರುವ ಸಂಪ್ರದಾಯವು ಇಲ್ಲಿ ಕಂಡುಬರುತ್ತದೆ.

ಯೇಸುಕ್ರಿಸ್ತನು ಹುಟ್ಟಿದ ದಿನವನ್ನು ಜಗತ್ತಿನಾದ್ಯಂತ ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ಕ್ರಿಸ್ಮಸ್ ಅಥವಾ ಕ್ರಿಸ್ತ ಜಯಂತಿ ಎಂದುಸಂಭ್ರಮ ಸಡಗರದಿಂದ ಆಚರಿಸಲಾಗುತ್ತದೆ.ಕ್ರೈಸ್ತ ಸುವಾರ್ತೆಯ ಪ್ರಕಾರ ಯೇಸು ಕ್ರಿಸ್ತನು ಮೇರಿ ಮತ್ತು ಜೋಸೆಫ್‌ರ ಮಗನಾಗಿ ಇಸ್ರೇಲ್‌ನ ಬೆತ್ಲೆಹೆಮ್ ಎಂಬ ಊರಿನಲ್ಲಿ ಈ ದಿನ ಜನಿಸಿದ. ಜುಡಾಯಿಸಮ್ (ಯಹೂದ್ಯ ಧರ್ಮದ)ನ ಪ್ರಕಾರ ಪ್ರವಾದನೆಗಳನ್ನು ನೆರವೇರಿಸಲು ಡೆವಿಡ್‌ನ ವಂಶದಲ್ಲಿ ಮೆಸ್ಸಾಯ (ದೇವದೂತ/ರಕ್ಷಕ) ಬರುವನೆಂಬ ನಂಬಿಕೆ ಇದ್ದು, ಆತನೇ 'ಯೇಸು' ಎಂದು ಕ್ರೈಸ್ತರು ಭಾವಿಸುತ್ತಾರೆ.

ಕ್ರಿಸ್ಮಸ್ ಸಂದರ್ಭದಲ್ಲಿ ಮನೆಯಲ್ಲಿ ಪುಟ್ಟದಾದ ಕೊಟ್ಟಿಗೆ ಕಟ್ಟಿ, ಕ್ರಿಸ್ತ ಜನನದ ಗೊಂಬೆಗಳನ್ನಿಡುವರು.ಕ್ರಿಸ್ಮಸ್ ವೃಕ್ಷಕ್ಕೆ ಅಲಂಕರಿಸುವುದು, ಮಿಸಲ್ಟೊ ಮೊದಲಾದ ಮರಗಳ ಎಲೆಗಳಿಂದ ತೋರಣ ಕಟ್ಟಿ ಸಂಭ್ರಮಿಸುವರು.ಕ್ರಿಸ್ಮಸ್‌ಗೆಂದೇ ವಿಶೇಷವಾಗಿ ತಯಾರಿಸಿದ ಸಿಹಿ ತಿಂಡಿಗಳನ್ನು, ಉಡುಗೊರೆಗಳನ್ನು ಹಂಚುವುದರ ಮುಖಾಂತರ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುವರು.[೯]

೯. ನೋಡಿ: ಕ್ರಿಸ್ಮಸ್–ವಿಕಿಪಿಡಿಯ : http://kn.m.wikipedia.org

ಧಾರವಾಡ ಜಿಲ್ಲೆಯಲ್ಲಿ ಹೋಲಿಕ್ರಾಸ್ ಚರ್ಚ್, ಬಾಸೆಲ್‌ಮಿಷನ್ ಚರ್ಚ, ಸೆಂಟ್ ಮೇರಿ ಚರ್ಚ ಹೇಬಿಕ್ ಮೆಮೋರಿಯಲ್ ಚರ್ಚು ಹಾಗೂ ಇನ್ನೂ ಹಲವಾರು ಚರ್ಚುಗಳಿದ್ದು, ಚರ್ಚುಗಳಲ್ಲಿ ಕ್ರಿಸ್ಮಸ್ ಹಬ್ಬದ ಪ್ರಯುಕ್ತ ಪ್ರಾರ್ಥನೆಯನ್ನು ಸರ್ವಧರ್ಮೀಯರಾದಿಯಾಗಿ ಸಲ್ಲಿಸುವರು.

## ೫.೨. ಜನಪದ ಚಿತ್ರಕಲೆಯ ಸಾಂದರ್ಭಿಕ ನೋಟ :

ಹಬ್ಬ, ಹುಣ್ಣಿಮೆಯ ಉತ್ಸವಾದಿ ವಿಶೇಷ ದಿನಗಳಲ್ಲಿ ಮಾನಸಿಕವಾಗಿ ಗಂಡುಹೆಣ್ಣುಗಳು ತಮ್ಮ ತಮ್ಮ ಪಾಲಿಗೆ ಬರುವಂಥ ವಿಷಯಗಳಲ್ಲಿ ಅವರು ತಮ್ಮ ಮನಸ್ಸು ಭಾವನೆಗಳನ್ನು ಪ್ರಕಟಗೊಳಿಸುವುದಕ್ಕೆ ಚಿತ್ರಕಲೆಯ ಮೂಲಕವೇ ಪ್ರಯತ್ನಿಸುವರು. ಹಬ್ಬ, ಹುಣ್ಣಿಮೆ, ಅಮವಾಸ್ಯೆ, ಜಾತ್ರೆಯ ದಿನಗಳು ಜನಪದರ ಸೃಜನಶೀಲತೆಯ ಪ್ರಕಟಣೆಗೆ ಅಥವಾ ಸೌಂದರ್ಯ ಪ್ರಜ್ಞೆಯ ಪ್ರದರ್ಶನಕ್ಕೆ ಒಳ್ಳೆಯ ಅವಕಾಶವನ್ನು ಮಾಡಿಕೊಡುವುದರ ಜೊತೆಗೆ ಒಂದು ವೇದಿಕೆಯಾಗಿ ನಿಲ್ಲುತ್ತವೆ. ಈ ಜನಪದ ಚಿತ್ರಕಲೆಯ ಸಾಂಸ್ಕೃತಿಕ ಸಂದರ್ಭವನ್ನು ಇಲ್ಲಿ ನೀಡಲಾಗಿದೆ.

| **ಸಂದರ್ಭ** | **ಜನಪದ ಚಿತ್ರಕಲೆ ಮತ್ತು ಆಚರಣೆ** |
|---|---|
| ಮಕರ ಸಂಕ್ರಾಂತಿ | ಎತ್ತುಗಳನ್ನು, ಚಕ್ಕಡಿ ಬಂಡಿಯನ್ನು ಸಿಂಗರಿಸುವುದು ಮತ್ತು ಮನೆಯ ಬಾಗಿಲಿಗೆ ತೋರಣ ಕಟ್ಟುವುದು. |
| ಭಾರತ ಹುಣ್ಣಿಮೆ | ಮನೆಯ ಗೋಡೆಯ ಮೇಲೆ ಹಾಗೂ ಅಂಗಳದಲ್ಲಿ ಬೆಳದಿಂಗಳ ಚಿತ್ರಗಳನ್ನು ಬರೆಯುವುದು. |
| ಹೋಳಿಹುಣ್ಣಿಮೆ | ಕಾಮಣ್ಣ ಮತ್ತು ರತಿದೇವಿಯರ ಮೂರ್ತಿಗಳನ್ನು ಪ್ರತಿಷ್ಠಾಪಿಸುವುದು. ಕಾಮಣ್ಣನ ಮುಖವಾಡಗಳನ್ನು ಮಾಡುವುದು. |
| ಯುಗಾದಿ ಹಬ್ಬ (ಅಮವಾಸ್ಯೆ) | ಮನೆಯ ಅಲಂಕರಣ, ತೋರಣ ಕಟ್ಟುವುದು, ಬಾಗಿಲಿಗೆ ಹೆಣಿಕೆ ಕಸೂತಿಯ ಪರದೆಗಳಿಂದ ಸಿಂಗರಿಸುವುದು, ರಂಗೋಲಿ ಹಾಕುವುದು, ಹೂಮಾಲೆ ಹಾಕುವುದು. |
| ಕಾರಹುಣ್ಣಿಮೆ | ಎತ್ತುಗಳನ್ನು ಸಿಂಗರಿಸುವುದು, ಕೊಂಬಣಸು, ಜೂಲು, ಗೆಜ್ಜೆ, ರಿಬ್ಬನ್ನುಗಳಿಂದ ಶೃಂಗರಿಸುವುದು. |
| ಮಣ್ಣೆತ್ತಿನ ಅಮವಾಸ್ಯೆ | ಮಣ್ಣಿನಿಂದ ಎತ್ತುಗಳ ಶಿಲ್ಪ/ಮೂರ್ತಿಗಳನ್ನು ತಯಾರಿಸುವುದು. |

| | |
|---|---|
| ಆಷಾಡಮಾಸ | ಗುಳ್ಳವ್ವನ ಪ್ರತಿಷ್ಠಾಪನೆ |
| ನಾಗರ ಅಮವಾಸ್ಯೆ(ನಾಗಪಂಚಮಿ) | ನಾಗಪ್ಪನ ಮೂರ್ತಿಗಳನ್ನು ಮಾಡುವುದು, ಅಂಗಳದಲ್ಲಿ ನಾಗದೇವರ ರಂಗೋಲಿ, ವಿವಿಧ ರೀತಿಯ ಸಿಹಿ ತಿಂಡಿಗಳನ್ನು ತಯಾರಿಸುವುದು.ಹತ್ತಿಯಿಂದ ಬಾಗಿಲಿಗೆ ಮಾಲೆ (ಕೊಕ್ಕಾಬತ್ತಿ, ಕ್ವಾಡಾಬತ್ತಿ) ಗಳನ್ನು ಮಾಡಿ ಹಾಕುವುದು. |
| ನೂಲ ಹುಣ್ಣಿಮೆ (ರಕ್ಷಾಬಂಧನ) | ನೂಲಿನಿಂದ ವಿವಿಧ ವಿನ್ಯಾಸದ ರಾಖಿಗಳನ್ನು ಮಾಡುವುದು. |
| ಬೆನಕನ ಅಮವಾಸ್ಯೆ (ಗಣೇಶ ಚತುರ್ಥಿ) | ಮಣ್ಣಿನಿಂದ ಗಣಪನ ಮೂರ್ತಿಗಳನ್ನು ತಯಾರಿಸುವುದು, ಇಲಿ, ಹಾವು ಮೂರ್ತಿಗಳನ್ನು ತಯಾರಿಸುವುದು ಅವುಗಳಿಗೆ ಬಣ್ಣಗಳನ್ನು ಲೇಪಿಸುವುದು, ರಂಗೋಲಿ ಹಾಕುವುದು. |
| ಮಹಾನವಮಿ/ವಿಜಯದಶಮಿ (ದಸರ) | ದುರ್ಗಾದೇವಿಯ ಮೂರ್ತಿ ಪ್ರತಿಷ್ಠಾಪಿಸಿ, ಅಲಂಕರಣ ಮಾಡುವುದು. ದಸರಾ ಗೊಂಬೆಗಳನ್ನು ಕೂರಿಸುವುದು. |
| ಗೋಕುಲಾಷ್ಠಮಿ | ರಂಗೋಲಿಯಿಂದ ಕೃಷ್ಣ, ಕೃಷ್ಣನ ಹೆಜ್ಜೆಗಳನ್ನು ಚಿತ್ರಿಸುವುದು. |
| ಮೊಹರಂ ಹಬ್ಬ | ಪಂಜಾಗಳನ್ನು ಸಿಂಗರಿಸುವುದು, ಡೋಲಿ ಕಟ್ಟುವುದು, ಮೈಮೇಲೆ ಬಣ್ಣದಿಂದ ಹುಲಿವೇಷವನ್ನು ಬರೆಸಿಕೊಳ್ಳುವುದು. |
| ಶೀಗೆ ಹುಣ್ಣಿಮೆ | ಎಣ್ಣೆ ಬುಟ್ಟಿ(ಬಿದಿರುಬುಟ್ಟಿ) ಗಳ ಮೇಲೆ ಸುಣ್ಣದಿಂದ ಚಿತ್ತಾರ ಬಿಡಿಸುವುದು |
| ದೀಪಾವಳಿ ಅಮವಾಸ್ಯೆ (ಹಟ್ಟಿಹಬ್ಬ) | ದೀಪಗಳಿಂದ ಮನೆಯನ್ನು ಸಿಂಗರಿಸುವುದು, ಸೆಗಣಿಯಿಂದ 'ಹಟ್ಟಿಲಕ್ಕವ್ವ', ಕೋಟೆ ಸೈನಿಕರ ಮೂರ್ತಿಗಳನ್ನು ಮಾಡುವುದು. ಕೊಟ್ಟಿಗೆಯ ಗೋಡೆಯ ಮೇಲೆ ಚಿತ್ರಗಳನ್ನು ಬಿಡಿಸುವುದು. ಆಕಾಶಬುಟ್ಟಿ ತಯಾರಿಸುವುದು. ಲಕ್ಷ್ಮೀ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜಿಸುವುದು. |
| ಗೌರಿಹುಣ್ಣಿಮೆ | ಹೆಣ್ಣುಮಕ್ಕಳು ಹೊಸ ಬಟ್ಟೆ ಧರಿಸಿ ದಂಡೆ ಹಾಕಿಕೊಂಡು ಸಂಭ್ರಮಿಸುವರು. ಸಕ್ಕರೆ ಗೊಂಬೆಗಳನ್ನು ಮಾಡುವರು. |

| | |
|---|---|
| ಕ್ರಿಸ್ಮಸ್ | ಬಾಲ ಯೇಸು ಹಾಗೂ ತಾಯಿ ಮೇರಿಯ ಮೂರ್ತಿಗಳನ್ನು, ಗೋದಲಿ(ಕೊಟ್ಟಿಗೆ)ಯನ್ನು ಮಾಡಿ ಸಿಂಗರಿಸುವರು. 'ಕ್ರಿಸ್ಮಸ್ ಟ್ರೀ'ಯ ಅಲಂಕಾರವನ್ನು ದೀಪಗಳಿಂದ ಮಾಡುವರು. |
| ಧಾನ್ಯ ಒಕ್ಕಲಿನ ಸಮಯ | ಕಣದಲ್ಲಿ ಧಾನ್ಯದ ರಾಶಿಯ ಸುತ್ತಲೂ ಚಿತ್ರಗಳನ್ನು ಬಿಡಿಸುವರು. |

## ೫.೩. ಚಿತ್ರಕಲೆ ಮತ್ತು ಸೌಂದರ್ಯ ಪ್ರಜ್ಞೆ:

ಮಾನವ ಸಮಾಜದ ಬೆಳವಣಿಗೆಯನ್ನು ಗಮನಿಸಿದರೆ ಕಾಲಕಾಲಕ್ಕೆ ಹೊಸ ಬದಲಾವಣೆಗಳು ಕಾಣಿಸಿಕೊಂಡಿವೆ. ಮಾನವನ ಸೃಜನಶೀಲ ಪ್ರತಿಭೆ ಇಂತಹ ಹೊಸ ಬೆಳವಣಿಗೆಗಳ ಪ್ರಾದುರ್ಭಾವಕ್ಕೆ ಕಾರಣವಾಗಿವೆ. ಮಾನವ ತನ್ನ ಬದುಕಿಗೆ ಅಗತ್ಯವಾದ ವಸ್ತುಗಳನ್ನು ಉತ್ಪಾದಿಸುವಲ್ಲಿ ಕೇವಲ ಅಗತ್ಯವನ್ನು ಮಾತ್ರ ಲಕ್ಷಿಸಿಲ್ಲ. ಅದರ ಜೊತೆಗೆ ಸುಂದರವಾಗಿರಬೇಕು ಎಂಬ ಸೌಂದರ್ಯಪ್ರಜ್ಞೆಯೂ ಜೊತೆಗೂಡಿದೆ. ವೃತ್ತಿ ಜೀವನದ ಕರಕುಶಲ ವಸ್ತುಗಳೂ ಈ ಸೌಂದರ್ಯ ಪ್ರಜ್ಞೆಗೆ ಹೊರತಾಗಿಲ್ಲ.

ಗೃಹಿಣಿಯರು ಬೆಳಗಿನ ಜಾವ, ಸಂಜೆ ಹೊತ್ತು ಮನೆಯಂಗಳವನ್ನು ಸಾರಿಸಿ ಶುಭ್ರಗೊಳಿಸಿ ರಂಗೋಲಿಯನ್ನು ಹಾಕುವುದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಸಂಪ್ರದಾಯ. ದೀಪಾವಳಿಗೆ ದೀಪಗಳ ಚಿತ್ರ, ಪಂಚಮಿಗೆ ನಾಗಪ್ಪ (ನಾಗರಹಾವು)ನ ಚಿತ್ರ, ಗೋಕುಲಾಷ್ಟಮಿಗೆ ಪುಟ್ಟ ಕೃಷ್ಣನ ಹೆಜ್ಜೆಗಳ ಚಿತ್ರ, ಗಣೇಶ ಚತುರ್ಥಿಗೆ ಗಣಪತಿ, ಹಾವು ಇಲಿಯ ಚಿತ್ರಗಳನ್ನು ಬಿಡಿಸಲಾಗುತ್ತದೆ.

ಜಾತ್ರೆಯ ಸಂದರ್ಭದಲ್ಲಿ ದೇವಸ್ಥಾನದ ಮುಂದೆ ಧಾನ್ಯ, ಹೂಗಳಿಂದ ಕೂಡಿದ ದೊಡ್ಡ 'ರಂಗ' ಮತ್ತು ಶವವನ್ನು ಹೂಳುವ ಶವದ ಗೂಡಿನ ಸುತ್ತ 'ರಂಗ' ಹೊಯ್ಯುವುದನ್ನು ಕಾಣಬಹುದು. ಅದೂ ಕೂಡ ರಂಗೋಲಿಯೇ ಆಗಿದೆ.ಹೀಗೆ ಸಂದರ್ಭಕ್ಕೆ ತಕ್ಕಂತೆ ಹಬ್ಬಹರಿದಿನಗಳಲ್ಲಿ ರಂಗೋಲಿ ಬಿಡಿಸುವ ಪದ್ಧತಿಯೂ, ಚಿತ್ರಗಳು ಬದಲಾವಣೆ ಹೊಂದುತ್ತವೆ.

ಕಸೂತಿ ಹಾಕುವ ವಿಷಯದಲ್ಲೂ ಕೂಡ ಸೌಂದರ್ಯಪ್ರಜ್ಞೆಯನ್ನು ಕಾಣಬಹುದು.ಕರವಸ್ತ್ರ, ಎಡೆವಸ್ತ್ರ, ಸೀರೆ ಕುಪ್ಪಸಗಳ ಮೇಲಿನ ವಿವಿಧ ವಿನ್ಯಾಸದ ಚಿತ್ರಗಳು ಅವರ ಸೃಜನಶೀಲ ಕಲೆಗಾರಿಕೆಗೆ, ಕ್ರಿಯಾಶೀಲತೆಗೆ ಸಾಕ್ಷಿಯಾಗುತ್ತವೆ. ಲಂಬಾಣಿ ಸಮುದಾಯದ

ಹೆಣ್ಣುಮಕ್ಕಳು ಹಾಕುವ ಕಸೂತಿ ಸಹ ವಿಶೇಷ ವಿನ್ಯಾಸ, ಶೈಲಿಯನ್ನು ಹೊಂದಿದ್ದು, ಇಂದು ಕಸೂತಿಯನ್ನು ಜಾಗತಿಕ ಮಟ್ಟದಲ್ಲಿ ಬೇಡಿಕೆ ಹೆಚ್ಚುವಂತೆ ಮಾಡಿದೆ.

ಕಲಘಟಗಿಯ ವಿಶೇಷ ಕುಸುರಿಕಲೆ ಮತ್ತು ಬಣ್ಣಬಣ್ಣದ ತೊಟ್ಟಿಲು ಹಾಗೂ ಕುರ್ಚಿ, ಮೇಜು, ಟೀಪಾಯಿ, ಮಕ್ಕಳಾಟಿಕೆಯ ಗೊಂಬೆಗಳು ಮತ್ತು ದಿನನಿತ್ಯದ ಜೀವನಕ್ಕೆ ಬಳಸಿಕೊಳ್ಳುವ ವಸ್ತುಗಳು ದೈನಂದಿನ ಬದುಕಿನ ಅಗತ್ಯಗಳನ್ನು ಪೂರೈಸುವ ವಸ್ತುಗಳಾಗಿರದೇ ಅವುಗಳಿಗೆ ಹೊಸ ಹೊಸ ರೂಪಕೊಟ್ಟು ಅಂದ ಚೆಂದದ ಬಣ್ಣದಿಂದ ಸಿಂಗಾರಗೊಳಿಸುವುದು ಕಲೆಗಾರನ ಸೌಂದರ್ಯ ಖಾಳಜಿಯು ಜೊತೆಗೆ ಬಂದಿರುವುದನ್ನು ಕಾಣುತ್ತೇವೆ.

ಕುಂಬಾರ ತಯಾರಿಸುವ ಮಡಕೆ-ಕುಡಿಕೆಗಳಲ್ಲಿ ಆತ ಉದ್ದ ಕತ್ತಿನ, ಡೊಳ್ಳುಹೊಟ್ಟೆಯ, ಕಿರಿದಾದ ಅಗಲವಾದ ಬಾಯಿಯ ನಾನಾ ಆಕಾರದ ಮಣ್ಣಿನ ವಸ್ತುಗಳನ್ನು ಮಾಡುತ್ತಾನೆ. ಇವುಗಳ ಮೇಲೆ ಗೆರೆಗಳನ್ನು ಎಳೆಯುವ ಮುಖಾಂತರ ಚಿತ್ರಗಳನ್ನು ಮೂಡಿಸುತ್ತಾನೆ. ವಿಭಿನ್ನ ಆಕಾರಗಳ ಮಡಕೆಗಳ ತಯಾರಿಯು ಆತನ ಸೌಂದರ್ಯಜ್ಞೆಗೆ ಸಾಕ್ಷಿಯಾಗಿದ್ದು, ಅವನ ವೃತ್ತಿಜೀವನದ ಭಾಗವಾಗಿಯೂ ಕೂಡ ಕೆಲಸ ಮಾಡುತ್ತದೆ.

ಒಟ್ಟಾರೆ ಧಾರವಾಡ ಜಿಲ್ಲೆಯ ಜನಪದ ಚಿತ್ರಕಲೆ ಗ್ರಾಮೀಣ ಜನಜೀವನದಲ್ಲಿ ಹಾಸುಹೊಕ್ಕಾಗಿದೆ.ನಗರ ವಾಸಿಗಳಲ್ಲಿಯೂ ಚಿತ್ರಕಲೆ ಕೆಲವು ಮಿತಿಗಳಲ್ಲಿ ಅಸ್ತಿತ್ವದಲ್ಲಿದೆ.ದೈನಂದಿನ ಜೀವನದ ಸ್ವರೂಪವೇ ಬೇರೆ. ಹಬ್ಬ, ಜಾತ್ರೆ ಮುಂತಾದ ವಿಶೇಷ ದಿನಗಳ ಸಂದರ್ಭವೇ ಬೇರೆ.ದಿನನಿತ್ಯದ ಬದುಕಿನಲ್ಲಿ ಗ್ರಾಮೀಣರು ತಮ್ಮ ಕುಲಕಸುಬುಗಳಲ್ಲಿ ಚಿತ್ರಕಲೆಯನ್ನು ಜೊತೆಜೊತೆಯಾಗಿಯೇ ಬೆಳೆಸಿಕೊಂಡು ಬಂದಿದ್ದಾರೆ.ಕುಂಬಾರ, ಚಮ್ಮಾರ, ಕಮ್ಮಾರ ಮುಂತಾದ ಕುಶಲಕರ್ಮಿಗಳಲ್ಲಿ ವೃತ್ತಿಯ ಒಟ್ಟೊಟ್ಟಿಗೆ ಚಿತ್ರಕಲೆಯು ಉಳಿದುಕೊಂಡು ಬಂದಿದೆ. ಹಬ್ಬ, ಜಾತ್ರೆ, ಉತ್ಸವಗಳಂಥಹ ವಿಶೇಷ ಸಂದರ್ಭಗಳಲ್ಲಿ ಚಿತ್ರಕಲೆಯ ಪ್ರಕಟಣೆಗೆ ಸಾಕಷ್ಟು ಅವಕಾಶಗಳು ಒದಗಿಬರುತ್ತವೆ. ಚಿತ್ರಕಲೆಯಲ್ಲಿ ಆಸಕ್ತಿ ಇರುವವರೆಲ್ಲ ಆ ವಿಶೇಷ ದಿನಗಳಲ್ಲಿ ತಾವು ಉತ್ಪಾದಿಸುವ, ಪ್ರಕಟಪಡಿಸುವ ವಸ್ತುಗಳಲ್ಲಿ ಚಿತ್ರಕಲೆ ಜೊತೆಗೂಡಿರುತ್ತದೆ. ಪ್ರತಿಯೊಂದು ಹಬ್ಬಕ್ಕೂ ಅದರದ್ದೇ ಆದ ವಿಭಿನ್ನ ಆಚರಣೆಗಳು, ಸಂಪ್ರದಾಯಗಳು ರೂಢಿಯಲ್ಲಿವೆ. ಇವುಗಳನ್ನನುಸರಿಸಿಯೇ ಚಿತ್ರಕಲೆಯ ಪ್ರದರ್ಶನವು ಇರುತ್ತದೆ.ಈ ಕಾರಣಗಳಿಂದ ಧಾರವಾಡ ಜಿಲ್ಲೆಯ ಜನಪದ ಚಿತ್ರಕಲೆಗೆ ಸಾಂಸ್ಕೃತಿಕ ಮಹತ್ವವು ಇದೆ.

*****